ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಏಪ್ರಿಲ್ 11, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 330 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999



## ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಕೊಟ್ಟೂರಿನ ಕವಿತಾ



ಕೊಟ್ಟೂರು, ಏ. 11 - ಕೊಟ್ಟೂರಿನ ಪಿಯು ಕಾಲೇಜಿನ ವಿದ್ಯಾರ್ಥಿನಿ ಕವಿತಾ ಬಿ. ವಿ 600/596 ಅಂಕಗಳನ್ನು ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆಯುವ ಮೂಲಕ ಕಾಲೇಜಿನ ಕಲಾ ವಿಭಾಗದಲ್ಲಿ ಸತತವಾಗಿ 8 ವರ್ಷಗಳಿಂದ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಈ ವರ್ಷವೂ ಕಲಾ ವಿಭಾಗದಲ್ಲಿ ಮೊದಲ ಸ್ಥಾನವನ್ನು ಪಡೆದು ತನ್ನ ಶೈಕ್ಷಣಿಕ ಕ್ಷೇತ್ರದಲ್ಲಿ ನಾಗಾಲೋಟದ ಅಭಿಯಾನವನ್ನು ನಡೆಸುತ್ತಿದೆ.

ಇದೇ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಅಮೃತ ಹೆಚ್ 600/587 ಅಂಕಗಳನ್ನು ಪಡೆಯುವ ಮೂಲಕ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ಹತ್ತನೇ ರಾ ್ಯಂಕ್ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಡಿನಿಯಾ 600/586 ಅಂಕಗಳನ್ನು ಪಡೆಯುವ ಮೂಲಕ ಇಂದಿರಾ ಎಜುಕೇಶನ್ ಟ್ರಸ್ಟ್ ಹಾಗೂ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಪ್ರಿನ್ಸಿಪಾಲರಾದ ವೀರಭದ್ರಪ್ಪ ಹೆಚ್. ಎನ್. ತಿಳಿಸಿದರು.

ಉಪನ್ಯಾಸಕರಾದ ತಿಪ್ಪೇಸ್ವಾಮಿ, ನಾಗರಾಜ್, ಮಂಜುನಾಥ್, ವೀರೇಶ್, ಕೊಟ್ರೇಶ್, ಲಕ್ಷ್ಮಿ, ಸುನಿತಾ, ಮಲ್ಲಿಕಾರ್ಜುನ, ಎಚ್ ಪವನ್ ಕುಮಾರ್ ಹಾಗೂ ಉಪನ್ಯಾಸಕರ ಅಭಿನಂದಿಸಿದರು.

## ನೂತನ ಸ್ವತಂತ್ರ ಪ.ಪೂ. ಕಾಲೇಜು ವಿಜ್ಞಾನ ವಿಭಾಗದಲ್ಲಿ ಶೇ.85 ಫಲಿತಾಂಶ


ಮನುಶ್ರೀ ಪಾಟೀಲ್


ಉಮ್ಮೈರಾ ಖಾನಂ


ರಂಜಿತಾ ಆರ್.

ದಾವಣಗೆರೆ, ಏ. 10 - 2023-24 ನೇ ಶೈಕ್ಷಣಿಕ ಸಾಲಿನ ಪಿಯು ಫಲಿತಾಂಶದಲ್ಲಿ ನಗರದ ನೂತನ ಪಿಯು ಕಾಲೇಜಿಗೆ ವಿಜ್ಞಾನ ವಿಭಾಗದಲ್ಲಿ ಶೇ.88.88 ಫಲಿತಾಂಶದೊಂದಿಗೆ 10 ವಿದ್ಯಾರ್ಥಿಗಳು ಶೇ. 85 ಕ್ಕೂ ಹೆಚ್ಚು ಫಲಿತಾಂಶ ಪಡೆದಿರುತ್ತಾರೆ.

ಮನುಶ್ರೀ ಪಾಟೀಲ್ 584 (97.33%) ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಉಮ್ಮೈರಾ ಖಾನಂ ಡಿ.ಹೆಚ್.ಕೆ. 569 (94.83%) ಅಂಕ ಪಡೆದು, ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದು, ರಂಜಿತಾ ಆರ್. 567 (94.50%) ಅಂಕ ಗಳಿಸಿ ಕಾಲೇಜಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಕಾಲೇಜಿನ ಅಧ್ಯಕ್ಷ ಎನ್. ಪರಶುರಾಮನಗೌಡ್ರು, ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ವಾಣಿ ಮಠಪತಿ, ರಿಜಿಸ್ಟ್ರಾರ್ ವೀರೇಶ್ ಪಟೇಲ್, ಡಾ. ಅಂಜು ಜಿ.ಎಸ್., ಹರ್ಷರಾಜ್ ಎ. ಗುಜ್ಜರ್, ಡೀನ್ ಪ್ರೊ. ಎಸ್. ಹಾಲಪ್ಪ, ಪ್ರಾಚಾರ್ಯರಾದ ಶ್ರೀಮತಿ ಕೆ. ಟಿ. ಸುಮಿತ್ರ, ಉಪಪ್ರಾಚಾರ್ಯ ಬಿ.ಜೆ. ಚೇತನ್ ಅವರುಗಳು ಅಭಿನಂದಿಸಿದ್ದಾರೆ.

## ಸಿಇಟಿ ಅರ್ಜಿಗೆ ಮತ್ತೊಂದು ಅವಕಾಶ

**(5ನೇ ಪುಟದಿಂದ)** ಬೆಂಗಳೂರು' ಇವರ ಹೆಸರಿಗೆ 600 ರೂ. ಮೊತ್ತದ ಡಿ.ಡಿ. ತೆಗೆಸಿ, ಸಿಇಟಿ ಅರ್ಜಿ ನಮೂನೆ ಸಹಿತ ಪ್ರಾಧಿಕಾರದ ಕಚೇರಿಗೆ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ ಸಲ್ಲಿಸಬೇಕು. ನೀಟ್ ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಸಿಇಟಿ ಪರೀಕ್ಷೆಯನ್ನೂ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದ್ದು, ಈ ಅಭ್ಯರ್ಥಿಗಳು ಸಹಾ ಈ ತಿಂಗಳ 12ರ ಸಂಜೆ 5 ಗಂಟೆಯೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

## ಪಿಯು ಪರೀಕ್ಷೆ : ವಿದ್ಯಾಚೇತನ, ವಿಶ್ವಚೇತನ, ವಿದ್ಯಾನಿಕೇತನ ಕಾಲೇಜಿಗೆ ಉತ್ತಮ ಫಲಿತಾಂಶ








ದಾವಣಗೆರೆ, ಏ.10- ನಗರದ ವಿದ್ಯಾಚೇತನ ಮತ್ತು ವಿಶ್ವಚೇತನ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅದ್ವಿತೀಯ ಫಲಿತಾಂಶ ದಾಖಲಾಗಿದೆ. ವಿಶ್ವಚೇತನ ವಿದ್ಯಾನಿಕೇತನ ಕಾಲೇಜು 100ಕ್ಕೆ 100ರಷ್ಟು ಫಲಿತಾಂಶ ಪಡೆದು, ಕಾಲೇಜಿನ ಕುಮಾರಿ ಸೃಷ್ಟಿ ಬಿ.ಕೊಳಾಳ್ 600ಕ್ಕೆ 592 ಅಂಕಗಳನ್ನು ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಜೊತೆಗೆ ಅನೇಕ ವಿದ್ಯಾರ್ಥಿಗಳು ವಿಷಯವಾರು 100 ಕ್ಕೆ 100 ರಷ್ಟು ಅಂಕಗಳನ್ನು ಗಳಿಸಿದ್ದಾರೆ. ಸುಮಾರು ಶೇ.80 ರಷ್ಟು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ಇನ್ನೂ ಅನೇಕ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳನ್ನು ಕಾರ್ಯದರ್ಶಿ ಡಾ|| ವಿಜಯಲಕ್ಷ್ಮಿ ವೀರಮಾಚನೇನಿ ಅವರು ಅಭಿನಂದಿಸಿದ್ದಾರೆ.

## ದವನ್ ಕಾಲೇಜಿನ ಖುಷ್ಬು ರಾಜ್‌ಪುರೋಹಿತ್ ಕಾಮರ್ಸ್‌ನಲ್ಲಿ ಜಿಲ್ಲಾ ತೃತೀಯ ಟಾಪರ್


ಖುಷ್ಬು ರಾಜ್‌ಪುರೋಹಿತ್


ಐಶ್ವರ್ಯ ಎಫ್ ಗೊಲ್ಲರ್


ಸಾಕ್ಷಿ ಪಿ. ಜೈನ್


ಹೆಚ್.ಸಿ. ಪ್ರೀತಿ

ದಾವಣಗೆರೆ, ಏ. 10 - 2023-24 ನೇ ಶೈಕ್ಷಣಿಕ ಸಾಲಿನ ಪಿಯು ಫಲಿತಾಂಶದಲ್ಲಿ ದವನ್ ಪಿಯು ಕಾಲೇಜಿಗೆ ಶೇ.94.33% ಫಲಿತಾಂಶದೊಂದಿಗೆ 57 ವಿದ್ಯಾರ್ಥಿಗಳು 85% ಕ್ಕೂ ಹೆಚ್ಚು ಫಲಿತಾಂಶ ಪಡೆದಿರುತ್ತಾರೆ.

ಖುಷ್ಬು ರಾಜ್‌ಪುರೋಹಿತ್ ಕಾಮರ್ಸ್‌ನಲ್ಲಿ 585 (97.50%) ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಐಶ್ವರ್ಯ ಎಫ್ ಗೊಲ್ಲರ್ ಹಾಗೂ ಸಾಕ್ಷಿ ಪಿ. ಜೈನ್ ಅವರುಗಳು 584 (97.33%) ಅಂಕಗಳನ್ನು ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಹೆಚ್.ಸಿ. ಪ್ರೀತಿ 582 (97%) ಅಂಕಗಳೊಂದಿಗೆ ಕಾಲೇಜಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳನ್ನು ಗೌರವ ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಅಂಜು ಜಿ.ಎಸ್. ನಿರ್ದೇಶಕ ಹರ್ಷರಾಜ್ ಎ ಗುಜ್ಜರ್, ಶೈಕ್ಷಣಿಕ ಸಲಹೆಗಾರರಾದ ಪ್ರೊ. ಬಾತಿ ಬಸವರಾಜ್, ಪ್ರಾಚಾರ್ಯರಾದ ಶ್ರೀಮತಿ ಅಶ್ವಿನಿ ಹೆಚ್.ಸಿ. ಅಭಿನಂದಿಸಿದ್ದಾರೆ.

# ವಿಡಿಯೋಗಾಗಿ ಅಪಹರಣ !

**(5ನೇ ಪುಟದಿಂದ)** ಪ್ರಕರಣ ದಾಖಲಿಸಲಾಗಿದೆ. ಇವರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಗಿದೆ ಎಂದು ಪ್ರತಾಪ್ ನಗರ ಪೊಲೀಸರು ತಿಳಿಸಿದ್ದಾರೆ.

17 ವರ್ಷದ ಆದೇಶ್ ಎಂಬ ಚಂದ್ರಪುರ ಜಿಲ್ಲೆಯ ಯುವಕ ಪ್ರಸಕ್ತ ಅಧ್ಯಯನಕ್ಕಾಗಿ ನಾಗಪುರದಲ್ಲಿ ನೆಲೆಸಿದ್ದಾನೆ. ಬೆಳಿಗ್ಗೆ 6.45ರ ಸಮಯದಲ್ಲಿ ಸ್ನೇಹಿತರ ಜೊತೆ ತೆರಳುತ್ತಿದ್ದ ಆದೇಶ್‌ನನ್ನು ಬಿಳಿ ಕಾರಿನಲ್ಲಿ ಬಂದ ಮೂವರು ಅಪಹರಿಸಿದ್ದಾರೆ.


ಈ ಸಂದರ್ಭದಲ್ಲಿ ಆದೇಶ್ ಜೊತೆಗಿದ್ದ ಸ್ನೇಹಿತರಾದ ಯಶ್ ಹಾಗೂ ವೇದಾಂತ್ ಅವರು ಶಿಕ್ಷಕರಿಗೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳೀಯ ಪೊಲೀಸರಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪೊಲೀಸರು ಸಿ.ಸಿ.ಟಿ.ವಿ. ದೃಶ್ಯಗಳನ್ನು ಪರಿಶೀಲಿಸಿದಾಗ ಈ ಕೃತ್ಯದಲ್ಲಿ ಭಾಗಿಯಾಗಿದ್ದ 18 ವರ್ಷದ ಸುಶಾಂತ್ ಪತ್ತೆ ಮಾಡಲಾಯಿತು. ಆತ ನೀಡಿದ ಮಾಹಿತಿಯನ್ನು ಆಧರಿಸಿ ಶ್ರೇಯಸ್, ಯಶ್ ಹಾಗೂ ಅರ್ನವ್ ಎಂಬುವವರನ್ನು ಬಂಧಿಸಲಾಗಿದೆ.

ಸಾಮಾಜಿಕ ಜಾಲತಾಣಕ್ಕಾಗಿ ಅಣಕು ವಿಡಿಯೋ ಚಿತ್ರಿಸಲು ಈ ರೀತಿ ಮಾಡಿದ್ದಾಗಿ ವಿಚಾರಣೆ ವೇಳೆ ನಾಲ್ವರು ಹೇಳಿದ್ದಾರೆ. ಕಾರು ಚಾಲನೆ ಮಾಡಿದ್ದ ಸುಶಾಂತ್, ವಾಹನ ಚಾಲನಾ ಅನುಮತಿ ಹೊಂದಿಲ್ಲ ಎಂಬುದೂ ಪತ್ತೆಯಾಗಿದೆ.

ಈ ವಿಷಯದಲ್ಲಿ ವಿನಾಯಿತಿ ನೀಡುವಂತೆ ವಿದ್ಯಾರ್ಥಿಗಳ ಪೋಷಕರು ಮನವಿ ಮಾಡಿಕೊಂಡಿದ್ದಾರೆ. ಮುಂದೆ ಈ ರೀತಿಯ ಕೃತ್ಯ ಮಾಡುವುದಿಲ್ಲ ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ. ನಂತರ ಪೊಲೀಸರು ಎಚ್ಚರಿಕೆಯೊಂದಿಗೆ ಅವರನ್ನು ಬಿಡುಗಡೆ ಮಾಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಸೈನ್ಸ್ ಅಕಾಡೆಮಿ ಪ.ಪೂ. ಕಾಲೇಜಿಗೆ ಶೇ.98 ಫಲಿತಾಂಶ




ದಾವಣಗೆರೆ, ಏ. 10- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿಗೆ ಶೇ. 98 ರಷ್ಟು ಫಲಿತಾಂಶ ಲಭಿಸಿದೆ.

119 ಅತ್ಯುನ್ನತ ಶ್ರೇಣಿಯಲ್ಲಿ, 172 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ದ್ದಾರೆ. ಕನ್ನಡ ಭಾಷಾ ವಿಷಯದಲ್ಲಿ ಏಳು, ಗಣಿತದಲ್ಲಿ ಏಳು, ಜೀವಶಾಸ್ತ್ರದಲ್ಲಿ ನಾಲ್ಕು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿದ್ದಾರೆ.

ಎಂ.ಸಿ. ಕೊಟ್ರಯ್ಯ 600 ಅಂಕಗಳಿಗೆ 587 (ಶೇ. 97.83) ಪಡೆದು ಕಾಲೇಜಿಗೆ ಪ್ರಥಮ ಸ್ಥಾನದಲ್ಲಿದ್ದಾರೆ.

ಕಾರ್ತಿಕ್ ಭೀಮ್‌ರಾವ್ ಖಟಾವ್‌ಕರ್ 600 ಕ್ಕೆ 582 (ಶೇ. 97) ದ್ವಿತೀಯ ಸ್ಥಾನ ಹಾಗೂ ಎ. ಸಾತ್ವಿಕ್ ಶಾಸ್ತ್ರಿ 600 ಕ್ಕೆ 581 (ಶೇ. 96.83) ತೃತೀಯ, ಡಿ.ಬಿ. ಧನಂಜಯ 600 ಕ್ಕೆ 579 (ಶೇ. 96.5), ಜಿ.ಕೆ. ವೈಷ್ಣವಿ 600 ಕ್ಕೆ 576 (ಶೇ. 96 ) ಅಂಕಗಳೊಂದಿಗೆ ನಾಲ್ಕನೇ ಹಾಗೂ ಐದನೇ ಸ್ಥಾನ ಗಳಿಸಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ಬಿಜೆಪಿ ಕಚೇರಿ ಉದ್ಘಾಟನೆ, ಬಹಿರಂಗ ಪ್ರಚಾರ ಸಭೆ

ಹೊನ್ನಾಳಿ, ಏ. 10- ಸೂರ್ಯ ಚಂದ್ರರಿರುವುದು ಎಷ್ಟು ಸತ್ಯವೋ ಮೋದಿ 3ನೇ ಬಾರಿ ಪ್ರಧಾನಿಯಾಗುವುದು ಅಷ್ಟೇ ಸತ್ಯ ಎಂದು ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಭರವಸೆ ವ್ಯಕ್ತಪಡಿಸಿದರು.

ಇಲ್ಲಿನ ಬಿಜೆಪಿ ಲೋಕಸಭಾ ಚುನಾವಣಾ ಕಾರ್ಯಾಲಯದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಬಾರಿಯ ಚುನಾವಣೆ ದೇಶದ ಮತ್ತು ನಮ್ಮೆಲ್ಲರ ಭವಿಷ್ಯದ ಚುನಾವಣೆಯಾಗಿದ್ದು, ದೇಶ ಮತ್ತು ರಾಜ್ಯದ ಪ್ರಜ್ಞಾವಂತ ಮತದಾರರು ಮತ್ತೊಮ್ಮೆ ಬಿಜೆಪಿಗೆ ಮತ ಹಾಕಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್ ಮಾತನಾಡಿ, ಹೊನ್ನಾಳಿ-ಶಿವಮೊಗ್ಗ ರಸ್ತೆಯ ಟಿ.ಬಿ. ವೃತ್ತದ ಬಲಭಾಗದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ನೂತನ ಕಾರ್ಯಾಲಯದ ಉದ್ಘಾಟನೆ ಇದೇ ದಿನಾಂಕ 11ರ ಗುರುವಾರ ಬೆಳಿಗ್ಗೆ ನಡೆಯಲಿದ್ದು, ಮಧ್ಯಾಹ್ನ ನೂತನ ಕಾರ್ಯಾಲಯದ ಪಕ್ಕದಲ್ಲೇ ಪಕ್ಷದ ಅಭ್ಯರ್ಥಿಯ ಪರ ಚುನಾವಣಾ ಪ್ರಚಾರ ಸಭೆ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕೆ ಲೋಕಸಭಾ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾ ಚುನಾವಣಾ ಉಸ್ತುವಾರಿ ಎಸ್.ಎ.ರವೀಂದ್ರನಾಥ್, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ಮತ್ತಿತರ ಮುಖಂಡರುಗಳು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರುಗಳಾದ ಕೆ.ಪಿ.ಕುಬೇರಪ್ಪ, ಡಿ.ಜಿ. ರಾಜಪ್ಪ, ಧರ್ಮಪ್ಪ, ಅರಕೆರೆ ನಾಗರಾಜ್, ಸುರೇಂದ್ರನಾಯ್ಕ್, ಇಂಚರ ಮಂಜುನಾಥ್, ಮಹೇಶ್ ಹುಡೇದ್, ಸಿ.ಆರ್.ಶಿವಾನಂದ್, ಬಾಬು ಹೋಬಳಿದಾರ್, ಮಾರುತಿ ನಾಯ್ಕ್, ದಿಡಗೂರು ಪಾಲಾಕ್ಷಪ್ಪ, ನೆಲಹೊನ್ನೆ ಮಂಜುನಾಥ್, ರಂಗನಾಥ್, ಕೆ.ವಿ.ಶ್ರೀಧರ್, ಎಂ.ಎಸ್.ಪಾಲಾಕ್ಷಪ್ಪ, ಬೀರಗೊಂಡನಹಳ್ಳಿ ಬಸವರಾಜ್, ದೊಡ್ಡೇರಿ ಗಿರೀಶ್, ಕೋಡಿಕೊಪ್ಪ ರವಿ, ಕೊನಾಯ್ಕನಹಳ್ಳಿ ಮಂಜು,ಬಲಮುರಿ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ತರಳಬಾಳು ಅನುಭವ ಮಂಟಪ ಕಾಲೇಜಿಗೆ ಶೇ.99.10 ಫಲಿತಾಂಶ




ದಾವಣಗೆರೆ, ಏ.10- ನಗರದ ತರಳಬಾಳು ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99.10ರಷ್ಟು ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಲ್ಲಿ ಗಗನ ಜಿ.ಸಿ 587 ಅಂಕಗಳನ್ನು ಹಾಗೂ ವಾಣಿಜ್ಯ ವಿಭಾಗದಲ್ಲಿ ಸಂಜನ ಎಂ ದೋತಿಹಾಳ್ 586 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 156 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 247 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಉತ್ತಮ ಸಾಧನೆ ಮಾಡಿದ್ದಾರೆ. ಕನ್ನಡ-4, ಗಣಿತ ಶಾಸ್ತ್ರದಲ್ಲಿ-3, ಜೀವಶಾಸ್ತ್ರದಲ್ಲಿ - 3 ವಿದ್ಯಾರ್ಥಿಗಳು, 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ.

## ಜಿ.ಎಂ. ಹಾಲಮ್ಮ ವಿಜ್ಞಾನ, ವಾಣಿಜ್ಯ ಪದವಿ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ




ದಾವಣಗೆರೆ,ಏ.10- ನಗರದ ಜಿ.ಎಂ. ಹಾಲಮ್ಮ ಪದವಿ ಪೂರ್ವ ಕಾಲೇಜಿಗೆ 2023-2024 ನೇ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಿಂದ ಎಸ್. ಭಾಗ್ಯಶ್ರೀ 566 (ಶೇ.94.33), ವಾಣಿಜ್ಯ ವಿಭಾಗದಲ್ಲಿ ಕೆ.ಜೆ.ಬಿಂದು 577 (ಶೇ. 96.17) ಅಂಕಗಳೊಂದಿಗೆ ಉತ್ತಮ ಫಲಿತಾಂಶ ಪಡೆಯುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಕಾಲೇಜಿನ ಆಡಳಿ ಮಂಡಳಿ, ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ಸಿದ್ಧಗಂಗಾ ವಿಜ್ಞಾನ ಕಾಲೇಜಿಗೆ ಶೇ. 98.83 ಫಲಿತಾಂಶ

ದಾವಣಗೆರೆ ಏ.10- ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ನಗರದ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿಗೆ ಶೇ.98.83ರಷ್ಟು ಫಲಿತಾಂಶ ದೊರಕಿದೆ.

ಪರೀಕ್ಷೆಗೆ ಹಾಜರಾದ 939 ಮಕ್ಕಳಲ್ಲಿ 612 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಷಯವಾರು ನೂರಕ್ಕೆ ನೂರು ಅಂಕಗಳನ್ನು 82 ಮಕ್ಕಳು ಪಡೆದಿದ್ದಾರೆ. ಕನ್ನಡ 17, ಗಣಿತ 31, ಜೀವಶಾಸ್ತ್ರ 24, ಕಂಪ್ಯೂಟರ್ ಸೈನ್ಸ್ 2, ರಸಾಯನಶಾಸ್ತ್ರ 6, ಸಂಸ್ಕೃತ 1, ಹಿಂದಿ 1.

ಶೇ.95ಕ್ಕಿಂತ ಅಧಿಕ ಅಂಕ ಪಡೆದವರ ಸಂಖ್ಯೆ 77, 369 ಮಕ್ಕಳು ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. 612 ಮಕ್ಕಳು ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

600ಕ್ಕೆ 591 ಗಳಿಸಿರುವ ತರನಂ ಸುಲ್ತಾನ ಇಂಗ್ಲೀಷ್ 95, ಹಿಂದಿ 100, ಭೌತಶಾಸ್ತ್ರ 96, ರಸಾಯನಶಾಸ್ತ್ರ, ಗಣಿತಶಾಸ್ತ್ರ ಹಾಗೂ ಜೀವಶಾಸ್ತ್ರದಲ್ಲಿ ತಲಾ 100 ಅಂಕಗಳನ್ನು ಗಳಿಸಿದ್ದಾಳೆ. ಹಾಗೂ ಲಾಸ್ಯ ಪಿ ಶೆಟ್ಟಿ ಇಂಗ್ಲಿಷ್ 96, ಕನ್ನಡ 99, ಭೌತಶಾಸ್ತ್ರ 98, ರಸಾಯನಶಾಸ್ತ್ರ 100, ಗಣಿತಶಾಸ್ತ್ರ 100 ಮತ್ತು ಜೀವಶಾಸ್ತ್ರ 98 ಗಳಿಸಿದ್ದಾಳೆ.

## ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ಅಂಜಿನಪ್ಪ



ಹರಪನಹಳ್ಳಿ, ಏ.10- ಅರಸೀಕೆರೆ ಗ್ರಾಮದ ಕೆ. ಡಿ.ಅಂಜಿನಪ್ಪ ಅವರನ್ನು ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಿ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಕೆ.ಪುಟ್ಟಸ್ವಾಮಿ ಆದೇಶ ಹೊರಡಿಸಿದ್ದಾರೆ.

## 17ನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ರಾಮಲಿಂಗಪ್ಪ ಭೈರಶೆಟ್ಟರ್**

**ದಾವಣಗೆರೆ.**

ಜನನ : 10.5.1940, ನಿಧನ : 10.04.2007

ನೀವು ನಮ್ಮನ್ನಗಲಿ ಹದಿನೇಳು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

**ನಿಮ್ಮ ಪತ್ನಿ ಶ್ರೀಮತಿ ರತ್ನ, ಪುತ್ರ, ಪುತ್ರಿಯರು ಸೊಸೆ, ಅಳಿಯಂದಿರು ಹಾಗೂ ಮೊಮ್ಮಕ್ಕಳು, ದಾವಣಗೆರೆ.**

### ಕೆ.ಎನ್. ಹಳ್ಳಿ ಗ್ರಾಮದ ರುದ್ರಮ್ಮ ನಿಧನ



ಹರಿಹರ ತಾಲ್ಲೂಕು ಕಡರನಾಯಕನಹಳ್ಳಿ ಗ್ರಾಮದ ಸಣ್ಣಬೀಮಜ್ಜರ ಟಿ. ಮಹದೇವಪ್ಪ ಅವರ ಧರ್ಮಪತ್ನಿ ಶ್ರೀಮತಿ ರುದ್ರಮ್ಮ (77) ದಿನಾಂಕ 10-04-2024 ರ ಬುಧವಾರ ಸಂಜೆ 5 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11-04-2024 ರ ಗುರುವಾರ ಬೆಳಗ್ಗೆ 11 ಗಂಟೆಗೆ ಕಡರನಾಯಕನಹಳ್ಳಿಯಲ್ಲಿ ನೆರವೇರಲಿದೆ.

## ನಗರದಲ್ಲಿ ಇಂದು ರಂಜಾನ್ ಆಚರಣೆ

ಪವಿತ್ರ ರಂಜಾನ್ ಹಬ್ಬವು ನಗರಾದ್ಯಂತ ಮುಸ್ಲಿಂ ಬಾಂಧವರು ಇಂದು ಆಚರಿಸಲಿದ್ದಾರೆ.

ಹಬ್ಬದ ಪ್ರಾರ್ಥನೆ (ನಮಾಜ್ ) ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಪಿ.ಬಿ. ರಸ್ತೆ ಹಳೇ ಈದ್ಗಾ ರಜಾವುಲ್ ಮುಸ್ತಾಫ ನಗರ ಹಾಗೂ ಎಸ್.ಓ.ಜಿ. ಕಾಲೋನಿಯಲ್ಲಿರುವ ಈದ್ಗಾಗಳಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಿದ್ದಾರೆ ಎಂದು ತಂಜೀಮ್ ಸಮಿತಿ ಘೋಷಿಸಿದೆ.

### ಸರ್ಕಾರಿ ನೌಕರರ ಕ್ರೆಡಿಟ್ ಸಹಕಾರ ಸಂಘ (ನಿ.)

# 272/04, ಬಸವ ಸದನ, 4ನೇ ಮುಖ್ಯ ರಸ್ತೆ, (ಚೇತನ್ ಹೋಟೆಲ್ ರಸ್ತೆ), ಪಿ.ಜೆ. ಬಡಾವಣೆ, ದಾವಣಗೆರೆ - 577002.

**ಪ್ರಕಟಣೆ**

ವಿಷಯ : ಸರ್ಕಾರಿ ನೌಕರರ ಕ್ರೆಡಿಟ್ ಸಹಕಾರ ಸಂಘ (ರಿ) #272/04, 'ಬಸವ ಸದನ', 4ನೇ ಮುಖ್ಯರಸ್ತೆ (ಚೇತನ ಹೋಟೆಲ್ ರಸ್ತೆ), ಪಿ.ಜೆ. ಬಡಾವಣೆ, ದಾವಣಗೆರೆ 577002. ಇವರ ವತಿಯಿಂದ ನೀಡುತ್ತಿರುವ ತಿಳುವಳಿಕೆ ನೋಟಿಸ್ ಈ ಕೆಳಕಂಡಂತೆ ಇರುತ್ತದೆ.

ಸರ್ಕಾರಿ ನೌಕರರ ಕ್ರೆಡಿಟ್ ಸಹಕಾರ ಸಂಘ (ರಿ) #272/04, 'ಬಸವ ಸದನ', 4ನೇ ಮುಖ್ಯ ರಸ್ತೆ (ಚೇತನ ಹೋಟೆಲ್ ರಸ್ತೆ), ಪಿ.ಜೆ.ಬಡಾವಣೆ, ದಾವಣಗೆರೆ-577002 ನೋಂದಾಯಿತ ಸಂಘವಾಗಿದ್ದು, 1988 ರಿಂದ ಕಾರ್ಯ ನಿರ್ವಹಿಸುತ್ತಿದ್ದ ಈ ಸಂಸ್ಥೆಯಲ್ಲಿ ಈ ಹಿಂದೆ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಮಂಜಪ್ಪ ಕೆ.ಎನ್. ಬಿನ್ ಸಿದ್ದಪ್ಪ ಮರಾಠಿ, ಸುಮಾರು 55 ವರ್ಷಗಳು, 1ನೇ ವಾರ್ಡ್, ಊರಮ್ಮ ದೇವಸ್ಥಾನ ರಸ್ತೆ, ಕಕ್ಕರಗೊಳ್ಳ ಗ್ರಾಮ ದಾವಣಗೆರೆ ತಾಲ್ಲೂಕು ಇವರು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಮ್ಮ ಸಂಘದಲ್ಲಿ ಹಣಕಾಸಿನ ದುರುಪಯೋಗ ಹಾಗೂ ತಪ್ಪು ಲೆಕ್ಕ ನಿರ್ವಹಣೆ ಮಾಡಿದ ಕಾರಣಕ್ಕಾಗಿ ಕಾರ್ಯದರ್ಶಿ ಹುದ್ದೆಯಿಂದ ವಜಾ ಮಾಡಲಾಗಿದ್ದು, ಸದರಿಯವರು ನಮ್ಮ ಸಂಘಕ್ಕೆ ಸಂಬಂಧಿಸಿದ ಯಾವುದೇ ಆರ್ಥಿಕ ವ್ಯವಹಾರ ಮಾಡದಂತೆ ನಿರ್ಬಂಧಿಸಲಾಗಿದೆ.

ನಮ್ಮ ಸಂಘದ ಸದ್ಯಸರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದರಿ ಶ್ರೀ ಮಂಜಪ್ಪ ಕೆ.ಎನ್. ಬಿನ್ ಸಿದ್ದಪ್ಪ ಮರಾಠಿ ಇವರೊಂದಿಗೆ ಯಾವುದೇ ವ್ಯವಹಾರ ಮಾಡಕೂಡದೆಂದು ಈ ಮೂಲಕ ತಿಳಿಸಲಾಗಿದೆ ಹಾಗೂ ಸದರಿಯವರು ನಮ್ಮ ಸಂಘಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಆಗಮಿಸಿದಲ್ಲಿ ಯಾವುದೇ ಆರ್ಥಿಕ ವ್ಯವಹಾರ ನಡೆಸಬಾರದೆಂದು ತಿಳಿಸಲಾಗಿದೆ. ಒಂದು ವೇಳೆ ಸದರಿಯವರು ತಮ್ಮಲ್ಲಿ ಸಂಘಕ್ಕೆ ಸಂಬಂಧಿಸಿದ ಯಾವುದೇ ಆರ್ಥಿಕ ವ್ಯವಹಾರಕ್ಕೆ ಆಗಮಿಸಿದಲ್ಲಿ ನಮ್ಮ ಸಂಘದ ಗಮನಕ್ಕೆ ತರಬೇಕೆಂದು ಈ ಮೂಲಕ ತಿಳಿಯ ಪಡಿಸಲಾಗಿದೆ. ಒಂದು ವೇಳೆ ಸದರಿಯವರೊಂದಿಗೆ ಯಾವುದೇ ಆರ್ಥಿಕ ವ್ಯವಹಾರ ನಡೆಸಿದಲ್ಲಿ ಈ ಸಂಘವು ಜವಾಬ್ದಾರರಲ್ಲ.

ದಿನಾಂಕ 10.04.2024

ಅಧ್ಯಕ್ಷರು
**ಸರ್ಕಾರಿ ನೌಕರರ ಕ್ರೆಡಿಟ್ ಸಹಕಾರ ಸಂಘ (ರಿ)**, ದಾವಣಗೆರೆ

## ಹಿರಿಯ ಪತ್ರಕರ್ತ ಹಳೇಬೀಡು ಕೃಷ್ಣಮೂರ್ತಿ ಅವರಿಗೆ ಪತ್ನಿ ವಿಯೋಗ



ದಾವಣಗೆರೆ, ಏ. 10- ರಾಜ್ಯದ ಹಿರಿಯ ಪತ್ರಕರ್ತ ಹಳೇಬೀಡು ಕೃಷ್ಣಮೂರ್ತಿ ಅವರ ಪತ್ನಿ ಶ್ರೀಮತಿ ಜಯಲಕ್ಷ್ಮಿ ಕೃಷ್ಣಮೂರ್ತಿ (85) ಅವರು ಬೆಂಗಳೂರಿನ ತಮ್ಮ ಮಗನ ಮನೆಯಲ್ಲಿ ಮೊನ್ನೆ ರಾತ್ರಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಸಾಹಿತ್ಯ, ಸಂಗೀತ, ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರಾಗಿದ್ದ ಜಯಲಕ್ಷ್ಮಿಯವರು ಎಂಬತ್ತರ ದಶಕದಲ್ಲಿ ತಮ್ಮ ಜನಪರ ವಿಚಾರಗಳ ಅನುಷ್ಠಾನಕ್ಕಾಗಿ ದಾವಣಗೆರೆ ನಗರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಅಲ್ಪ ಮತಗಳ ಅಂತರದಿಂದ ಪರಾಜಿತರಾಗಿದ್ದರು.

ಕೃಷ್ಣಮೂರ್ತಿ ಅವರು ನಗರದ ನಗರವಾಣಿ ಪತ್ರಿಕೆ, ಹಾಸನದಲ್ಲಿ ಜನಮಿತ್ರ, ಇಂಡಿಯನ್ ಎಕ್ಸ್‌ಪ್ರೆಸ್, ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರರಾಗಿ, ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಶ್ರೀಮತಿ ಜಯಲಕ್ಷ್ಮಿ ಅವರು ಸಾಥ್ ನೀಡಿದ್ದರು. ಶ್ರೀಮತಿ ಜಯಲಕ್ಷ್ಮಿ ಮತ್ತು ಕೃಷ್ಣಮೂರ್ತಿ ದಂಪತಿ ಇತ್ತೀಚೆಗಷ್ಟೇ 64ನೇ ವರ್ಷದ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡಿದ್ದರು.

ಪತಿ , ಇಬ್ಬರು ಪುತ್ರರು, ಐವರು ಪುತ್ರಿಯರು ಹಾಗೂ ಅಪಾರ ಬಂಧು - ಮಿತ್ರರನ್ನಗಲಿರುವ ಮೃತರ ಅಂತ್ಯಸಂಸ್ಕಾರವನ್ನು ಯುಗಾದಿ ದಿನವೇ ಚಾಮರಾಜನಗರಪೇಟೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ಸಂತಾಪ** : ಶ್ರೀಮತಿ ಜಯಲಕ್ಷ್ಮಿ ಕೃಷ್ಣಮೂರ್ತಿಯವರ ನಿಧನಕ್ಕೆ ಮಾಜಿ ಸಚಿವ ಹೆಚ್. ಆಂಜನೇಯ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ದಾವಣಗೆರೆ ಮತ್ತು ಹಾಸನ ಮಾಧ್ಯಮ ಸ್ನೇಹಿತರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರುಗಳು ಸಂತಾಪ ಸೂಚಿಸಿದ್ದಾರೆ.

### ಪ್ಯಾರಿಜಾನ್ ನಿಧನ



ದಾವಣಗೆರೆ ಮಿಲ್ಲತ್ ಕಾಲೋನಿ ವಾಸಿ
ಲೇಟ್ ಶೇಕ್ ಇಮಾಮ್ ಸಾಬ್ (ನಿವೃತ್ತ ಲೈನ್‌ಮ್ಯಾನ್) ಇವರ ಧರ್ಮಪತ್ನಿ

**ಪ್ಯಾರಿಜಾನ್** (76)

ಇವರು ದಿನಾಂಕ 10.04.2024ರ ಬುಧವಾರ ಸಂಜೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. 6 ಜನ ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 11.04.2024ರ ಗುರುವಾರ ಬೆಳಿಗ್ಗೆ 9.30ಕ್ಕೆ ಶಿವನಗರ ರಸ್ತೆಯಲ್ಲಿರುವ ಹೊಸ ಖಬರಸ್ಥಾನದಲ್ಲಿ ರಂಜಾನ್ ನಮಾಜ್ ನಂತರ ದಫನ್ ಮಾಡಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು, ಮೊ : 9448233121, 9343136080**

## ನಾಳೆಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸುತ್ತ ನಿಷೇಧಾಜ್ಞೆ ಜಾರಿ

ದಾವಣಗೆರೆ,ಏ.10- ಲೋಕ ಸಭೆ ಚುನಾವಣೆಗೆ ನಾಡಿದ್ದು ದಿನಾಂಕ 12 ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸುತ್ತಮುತ್ತ 100 ಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ದಾವಣಗೆರೆ ಕ್ಷೇತ್ರಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಚುನಾವಣಾಧಿಕಾರಿಗಳ ಕಚೇರಿಯಾಗಿದ್ದು, ದಿನಾಂಕ 12ರ ಶುಕ್ರವಾರ ಬೆಳಿಗ್ಗೆ 6 ರಿಂದ ಇದೇ ದಿನಾಂಕ 22ರ ಸಂಜೆ 6 ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವೆಂಕಟೇಶ ಎಂ. ವಿ. ಅವರು ಆದೇಶಿಸಿದ್ದಾರೆ.


YOGI RAM
SHASHI EDUCATIONAL TRUST (R)
LALITHA INTERNATIONAL PUBLIC SCHOOL
LALITHA PRE UNIVERSITY COLLEGE
LOKIKERE MAIN ROAD, DAVANAGERE - 577 005.
II PUC RESULT - 2023-24
CONGRATULATIONS
100/100
DISTINCTION : 51 1ST CLASS : 48 II CLASS : 5
DEPARTMENT OF SCIENCE
BEST WISHES
Smt. SHASHIKALA E R
PRESIDENT
KANNADA - 2 | CHEMISTRY - 2 | MATHS - 7 | BIOLOGY - 1 | TOTAL : 12
97.33% 1
SATYAVATI S
BIO -100
97.00%
M SWALIHA
M-100, C-100
96.50%
KAVANA K G
96.50%
MANJUNATH M C
M-100, C-100
MALLIKARJUN G H 96.16%
MADHURA K 95.66%
ANKITHA K M 95.50%
DEEPA S.K 94.83%
KISHOR G D 94.66%
AJAY U 94.50
HEMANTH M 94.00%
BASAVARAJ U D 93.50%
DEEKSHITHA S P 93.50%
NAYANATARA K 93.33%
PRIYANKA H B 93.16%
VIKAS K 92.33%
ANESS SANJANA 92.16%
SANJANA G 92.00%
MANYA U 91.83%
SAHANA K R 91.83%
CHINMAY 91.66%
VIJAYA ARUN S 91.00%
MANOJ K M 90.33%
SHRINIVASA K R 90.33%
HARSHA A C 90.00%
ABHISHEK C G 89.66%
RANJITHA B 88.83%
ANKITHA S A 88.66%
CHAMAN SHAK 88.60%
POOJA M S 88.5%
TEJASWINI PA 88.5%
NAGAMMA K H 88.33%
NEERALAGI R 87.16%
BINDU P S 86.83%
PURUSHOTTAM M 86.5%
VIJAYA KUMAR B D 86 %
AMITH R 85.83 %
VIJAYA KUMAR M 85.83 %
MUBARAK NEGALUR 85.33%
PRASHANTH B 85.33%
SHARATH G 85.16%
R M SHUBHA 84.83%
PAVITHRA 84.5%
SANIYA MIRZA 84.33%
PAVAN M V 84 %
NAYAZ S 83.83 %
SRUJAN KUMAR M L 83.16 %
SNEHA K N 82.66 %
MALLIK REEHAN K S 82.5 %
RAKSHITHA H R 82.16 %
DARSHAN K S 81.83 %
SHIVAYOGI M 80.83 %
DEEKSHA K R 79.33 %
MEGHANA B M 79.33%
LAVANYA N 78.66%
NIHARIKA R MALEMATH 78.5%
SHAGUFTH ANJUM 77.83%
PUNITH H 77.5%
SANJAY G R 77.16 %
PRASHANTH REDDY P N 76.33 %
P VISHNU 75.83%
ASHWINI K M 74.16%
VISHWAS B G 74.16
NIRANJAN K R 73.83
BHARATH KUMAR N A 73.16
DARSHAN K N 72.83%
AFSANA PRAVEEB 72.33%
VARUN S G 72.33%
BHAVAN H G 72%
SANGEETHA H N 72%
LAKSHMIDEVI 71.33%
BI BI HAJIRA S 70%
COMMERCE TOPPERS
K P CHANDANA 96.33%
GOUSIYA R 95.67%
RAKSHITHA V R 94.67%
GANESH H 91.83%
SUHASH B M 68.33%
AKHIL NAIK K R 67.5%
PAVAN G P 67.16%
SHRINIDHI B G 63.66%
S PRAJWAL 58.33%
SINCHAN H 54.16%
SAMPREETH M 89.83%
VIDYASHREE N 89.67%
HARISH V 89.5%
PREETHI B D 89.17%
PALLAVI A U 88.67%
UMARANI C K 85.5%
GAGANA B M 82.33%
TEJU H N 80.33%
RAVISHANKAR H P 78.33%
LIKHITH A 77.5%
HARISH NAIK P 73.83%
SANJAY K A 69.83%
ARPITHA 69.67
PRAVEEN A B 68.5%
GANESH S S 67.17%
LOHITH G C 65.67
TEJAS S M 63.67
INCHARA H G 62.5%
SACHIN B N 62.17%
GOWATHAM H M 56.83%
ANURADHA N 53%
ನಮ್ಮ ಲಲಿತಾ ವಿದ್ಯಾ ಸಂಸ್ಥೆ ವತಿಯಿಂದ ಪ್ರತಿ ವರ್ಷ ಶಾಲಾ ಮತ್ತು ಕಾಲೇಜಿನಲ್ಲಿ ಶೈಕ್ಷಣಿಕವಾಗಿ ಶೇಕಡ 96ಕ್ಕಿಂತ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 10 ಗ್ರಾಂ ಬಂಗಾರದ ಪದಕ ಮತ್ತು ಸ್ಮರಣಿಕೆಯನ್ನು ನೀಡಿ ಗೌರವಿಸಲಾಗುತ್ತಿದೆ. ಅಂತೆಯೇ ಪ್ರಸ್ತುತ 2023-24ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ವಿಜ್ಞಾನ ವಿಭಾಗದಿಂದ ಐದು ವಿದ್ಯಾರ್ಥಿಗಳು ಮತ್ತು ವಾಣಿಜ್ಯ ವಿಭಾಗದದಿಂದ ಒಬ್ಬ ವಿದ್ಯಾರ್ಥಿ ಒಟ್ಟು ಆರು ವಿದ್ಯಾರ್ಥಿಗಳು 10ಗ್ರಾಂ ಬಂಗಾರದ ಪದಕ ಮತ್ತು ಸ್ಮರಣಿಕೆ ಭಾಜನರಾಗಿರುವುದು ತುಂಬಾ ಸಂತಸ ಹಾಗೂ ಶ್ಲಾಘನೀಯ ವಿಚಾರವಾಗಿದೆ.
From : MANAGEMENT, TEACHING AND NON - TEACHING STAFF
Contact : 7022004042 / 7022004109 / 9980629965

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಗುರುವಾರ, ಏಪ್ರಿಲ್ 11, 2024 ☎ 08192 254736 ✆ 91642 99999


# ರಾಜ್ಯದಾದ್ಯಂತ ಶೇ.81.15 ಫಲಿತಾಂಶ

**ದಕ್ಷಿಣ ಕನ್ನಡ ಜಿಲ್ಲೆಗೆ ಮೊದಲ ಸ್ಥಾನ, ಗದಗ ಜಿಲ್ಲೆಗೆ ಕೊನೆ ಸ್ಥಾನ**

ಬೆಂಗಳೂರು, ಏ. 10 - ಕಳೆದ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು ರಾಜ್ಯದಲ್ಲಿ ಒಟ್ಟು ಶೇಕಡ 81.15 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಈ ಬಾರಿ 6,81,079 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 5,52,690 ಮಂದಿ ತೇರ್ಗಡೆಯಾಗಿದ್ದಾರೆ. ಬಾಲಕಿಯರು ಶೇ. 84.87 ರಷ್ಟು ತೇರ್ಗಡೆ ಹೊಂದಿದ್ದರೆ, ಬಾಲಕರು 76.98 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

1,53,370 ವಿದ್ಯಾರ್ಥಿಗಳು ಶೇ. 85ಕ್ಕಿಂತ ಹೆಚ್ಚು ಅಂಕ ಪಡೆದಿದ್ದರೆ, ಶೇ. 85ಕ್ಕಿಂತ ಕಡಿಮೆ ಹಾಗೂ ಶೇ. 60ಕ್ಕಿಂತ ಹೆಚ್ಚು ಅಂಕ ಪಡೆದವರು 2,89,733 ಇದ್ದಾರೆ. ಶೇ. 60ಕ್ಕಿಂತ ಕಡಿಮೆ ಹಾಗೂ ಶೇ. 50ಕ್ಕಿಂತ ಹೆಚ್ಚು 72,098, ಶೇ. 50 ಕ್ಕಿಂತ ಕಡಿಮೆ ಪಡೆದವರು 37,489 ವಿದ್ಯಾರ್ಥಿಗಳು.

ವಿಜ್ಞಾನ ವಿಭಾಗದಲ್ಲಿ 89.96 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, ವಾಣಿಜ್ಯ ವಿಭಾಗದಲ್ಲಿ 80.94 ರಷ್ಟು, ಕಲಾ ವಿಭಾಗದಲ್ಲಿ 68.36 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಶೇಕಡ 97.37 ರಷ್ಟು ವಿದ್ಯಾರ್ಥಿಗಳು ಸಾಧನೆ ಮಾಡಿ ಮೊದಲ ಸ್ಥಾನದಲ್ಲಿದ್ದು, ಗದಗ ಕೊನೆಯ ಸ್ಥಾನಕ್ಕೆ ನಿಂತಿದೆ. ಉಡುಪಿ ಶೇಕಡ 96.80, ವಿಜಯಪುರ ಶೇ. 94.89 ತೇರ್ಗಡೆಗೊಂಡು ನಂತರದ ಸ್ಥಾನ ಪಡೆದುಕೊಂಡಿವೆ.

ಕೊಡಗು ಶೇ. 92.13, ಹಾಸನ 85.83, ಚಾಮರಾಜನಗರ ಶೇ. 84.99, ಮೈಸೂರು ಶೇ. 83.13, ದಾವಣಗೆರೆ ಶೇ. 80.96, ಮಂಡ್ಯ ಶೇ. 80.56ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಗೊಂಡಿದ್ದಾರೆ.

ಮೂರೂ ವಿಭಾಗಗಳಲ್ಲಿ ಪ್ರಥಮ ಸ್ಥಾನಗಳನ್ನು ನಗರ ಪ್ರದೇಶದ ಜೊತೆ ಗ್ರಾಮೀಣ ವಿದ್ಯಾರ್ಥಿಗಳು ಹಂಚಿಕೆ ಮಾಡಿಕೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ (7ನೇ ಪುಟಕ್ಕೆ)

# ಪಿ.ಯು: ಜಿಲ್ಲೆಗೆ 21ನೇ ಸ್ಥಾನ

## ಕಲಾ ವಿಭಾಗದಲ್ಲಿ ಹೀನಾಬಾನು, ವಾಣಿಜ್ಯದಲ್ಲಿ ರೇಷ್ಮಾ ಬಾನು, ವಿಜ್ಞಾನದಲ್ಲಿ ಮೊಹಮ್ಮದ್ ಸುಹೇಲ್, ಅಮೃತ ದೊಡ್ಡ ಬಸಪ್ಪನವರ್, ಅನನ್ಯ, ಆಕಾಶ್ ಸಿ.ಪಾಟೀಲ್ ಜಿಲ್ಲೆಗೆ ಪ್ರಥಮರು

ದಾವಣಗೆರೆ, ಏ.10- ಕಳೆದ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ಫಲಿತಾಂಶ ಪ್ರಕಟವಾಗಿದ್ದು ಜಿಲ್ಲೆಗೆ ಶೇ 80.96 ರಷ್ಟು ಫಲಿತಾಂಶ ಬಂದಿದ್ದು ಶೇ 74.27 ಗಂಡು, ಶೇ 82.01 ರಷ್ಟು ಹೆಣ್ಣು ಮಕ್ಕಳು ಉತ್ತೀರ್ಣರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚುನಾವಣಾ ಸಂಬಂಧ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಏ.10 ರಂದು ಫಲಿತಾಂಶ ಪ್ರಕಟವಾಗಿದ್ದು ಹೆಚ್ಚಿನ ವಿವರಗಳು ಬರಬೇಕಾಗಿದೆ. ಈ ವರ್ಷ ಜಿಲ್ಲೆಯಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಯನ್ನು 19,644 ರೆಗ್ಯುಲರ್, 422 ಖಾಸಗಿ ಸೇರಿ 20066 ವಿದ್ಯಾರ್ಥಿಗಳು ತೆಗೆದುಕೊಂಡಿದ್ದರು. ಇದರಲ್ಲಿ 15,904 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ 80.96 ರಷ್ಟು ಫಲಿತಾಂಶ ಪಡೆದಿದ್ದಾರೆ.

ಕಳೆದ ವರ್ಷ ಶೇ 75.72 ರಷ್ಟು ಫಲಿತಾಂಶ ಬಂದಿತ್ತು. ಈ ವರ್ಷ ಶೇ. 5.24 ರಷ್ಟು ಫಲಿತಾಂಶ ಹೆಚ್ಚಳವಾಗಿದೆ. ಜಿಲ್ಲೆಗೆ ಟಾಪ್ ಬಂದವರಲ್ಲಿ ಕಲಾ ವಿಭಾಗದಲ್ಲಿ ಹರಿಹರದ ಶ್ರೀಮತಿ ಗಿರಿಯಮ್ಮ ಕಾಂತಪ್ಪ ಮಹಿಳಾ ಪದವಿ ಪೂರ್ವ ಕಾಲೇಜಿನ ಹೀನಬಾನು ಪಿ.ಕೆ. 591 (ಶೇ 98) ಅಂಕ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ದಾವಣಗೆರೆ ತಾಲ್ಲೂಕು ಗೋಪನಾಳು ಸರ್ಕಾರಿ ಪದವಿ ಪೂರ್ವ ಕಾಲೇಜಿನ ರೇಷ್ಮಾ ಬಾನು 589 ಅಂಕ ಪಡೆದು ಶೇ 98.16 ರಷ್ಟು ಫಲಿತಾಂಶ ಪಡೆದು ಜಿಲ್ಲೆಗೆ ಮೊದಲಿಗರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಲೋಕಿಕೆರೆ ರಸ್ತೆಯಲ್ಲಿನ ಸರ್‌ಎಂವಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಮೊಹಮ್ಮದ್ ಸುಹೇಲ್, ಅಮೃತ ದೊಡ್ಡ ಬಸಪ್ಪನವರ್, ಅನನ್ಯ ಹೆಚ್.ಎಸ್, ಆಕಾಶ್ ಸಿ.ಪಾಟೀಲ್ ಇವರು 593 ಅಂಕ ಶೇ 98.83 ರಷ್ಟು ಸಮನಾದ ಫಲಿತಾಂಶ ಹಂಚಿಕೊಂಡಿದ್ದಾರೆ ಎಂದರು.

**ವಿಭಾಗವಾರು ಫಲಿತಾಂಶ:** ಕಲಾ ವಿಭಾಗದಲ್ಲಿ ಶೇ 57.83 ರಷ್ಟು ಫಲಿತಾಂಶ ಬಂದಿದ್ದು ಇದರಲ್ಲಿ ಗಂಡು ಶೇ. 45, ಹೆಣ್ಣು ಶೇ. 66.46 ರಷ್ಟು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ. 76.22 ರಷ್ಟು ಫಲಿತಾಂಶ ಬಂದಿದ್ದು ಗಂಡು ಶೇ.65.5, ಹೆಣ್ಣು ಶೇ.80.8, ವಿಜ್ಞಾನವಿಭಾಗದಲ್ಲಿಶೇ (7ನೇ ಪುಟಕ್ಕೆ)



ಜಿಲ್ಲೆಗೆ ಪ್ರಥಮರಾದ ದಾವಣಗೆರೆಯ ಸರ್.ಎಂ.ವಿ. ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು.

### ನಗರಕ್ಕಿಂತ ಗ್ರಾಮೀಣರ ಮೇಲುಗೈ

**ಫಲಿತಾಂಶದಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ವಿದ್ಯಾರ್ಥಿಗಳು ಶೇ 1.1 ರಷ್ಟು ಮೇಲುಗೈ ಸಾಧಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ 73.65 ಗಂಡು, ಶೇ 84.6 ಹೆಣ್ಣು ಉತ್ತೀರ್ಣರಾದರೆ ನಗರ ಪ್ರದೇಶದ ಒಟ್ಟು ಫಲಿತಾಂಶ ಶೇ 80.75 ರಲ್ಲಿ ಗಂಡು ಶೇ 74.41, ಹೆಣ್ಣು ಶೇ 81.37 ರಷ್ಟು ಫಲಿತಾಂಶ ಪಡೆದಿದ್ದಾರೆ.**

### ಶೇ.100 ಫಲಿತಾಂಶ ಪಡೆದ ಕಾಲೇಜು

**ದಾವಣಗೆರೆ ಅಂಜುಂ ಪದವಿ ಪೂರ್ವ ಕಾಲೇಜು, ಲೇಬರ್ ಕಾಲೋನಿ, ಜೈನ್ ಟ್ರಿನಿಟಿ ಪದವಿ ಪೂರ್ವ ಕಾಲೇಜು, ಅನ್‌ಮೋಲ್ ಪದವಿ ಪೂರ್ವ ಕಾಲೇಜು, ಶ್ರೀ ಗೀತಂ ಪದವಿ ಪೂರ್ವ ಕಾಲೇಜು, ದಾವಣಗೆರೆ.ಶೇ 100 ರಷ್ಟು ಫಲಿತಾಂಶ ಪಡೆದ ಕಾಲೇಜುಗಳಾಗಿವೆ.**

# ಪಂಚಮಸಾಲಿ ಸಮುದಾಯ ಬಿಜೆಪಿಯನ್ನೇಕೆ ಬೆಂಬಲಿಸಬೇಕು ?



**ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಸ್ವಾಮೀಜಿ**

ಹರಿಹರ, ಏ.10 - ಕರ್ನಾಟಕ ರಾಜ್ಯದಲ್ಲಿ ಕಳೆದ 25 ವರ್ಷಗಳಿಂದ ಬಿಜೆಪಿಯನ್ನು ಕಟ್ಟುವಲ್ಲಿ ಪಂಚಮಸಾಲಿ ಸಮಾಜದ ಜನರ ಪಾತ್ರ ಬಹುಮುಖ್ಯವಾಗಿದೆ. ಆದರೆ, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಒಂದು ಕ್ಷೇತ್ರಕ್ಕೆ ಮಾತ್ರ ಟಿಕೆಟ್ ನೀಡಿರುವುದು ಅಸಮಾಧಾನ ತರಿಸಿದೆ ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಶ್ರೀಗಳು, ರಾಜ್ಯದ ಗ್ರಾಮೀಣ ಪ್ರದೇಶಗಳಿಂದ ಹಿಡಿದು ತಾ.ಪಂ., ಜಿ.ಪಂ. ಸೇರಿದಂತೆ ರಾಜ್ಯಮಟ್ಟದಲ್ಲಿ ಪಂಚಮಸಾಲಿ ಸಮಾಜದ ಜನರು ಬಿಜೆಪಿಗೆ ಬೆಂಬಲವಾಗಿ ನಿಂತಿದ್ದರಿಂದ ಎರಡು ಬಾರಿ ರಾಜ್ಯದಲ್ಲಿ ಅಧಿಕಾರ ಮಾಡುವುದಕ್ಕೆ ಅವಕಾಶ ಸಿಕ್ಕಿತು. ಆದರೆ, ಅಧಿಕಾರ ಮಾಡಿದ ಸಂದರ್ಭದಲ್ಲಿ ಬಿಜೆಪಿ ಸರ್ಕಾರ ಪಂಚಮಸಾಲಿ ಸಮುದಾಯದವರಿಗೆ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಾ ಬಂದಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ಒಬ್ಬರನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ವಿಧಾನಸಭೆ ಅಧ್ಯಕ್ಷ ಮತ್ತು ಕೋರ್ ಕಮಿಟಿ ಸದಸ್ಯರನ್ನಾಗಿ ನೇಮಕ ಮಾಡಲಿಲ್ಲ. ಲಿಂಗಾಯತ ಧರ್ಮದ ಒಳಪಂಗಡಗಳಲ್ಲಿ ಶೇ.10 ರಷ್ಟು ಕಡಿಮೆ ಜನಸಂಖ್ಯೆ ಇರೋರಿಗೆ 4 ಜನರಿಗೆ ಕೋರ್ ಕಮಿಟಿಯಲ್ಲಿ ಮತ್ತು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ರಾಜ್ಯಾಧ್ಯಕ್ಷ ಸ್ಥಾನ ಸಿಕ್ಕಿರುವಾಗ ನಾವು ಪ್ರಬಲ ಜನರು ಇದ್ದು, ಯಾಕೆ ಅವರನ್ನು ಬೆಂಬಲಿಸಬೇಕು ?

ರಾಜ್ಯದ ಸುಮಾರು 16 ಜಿಲ್ಲೆಯಲ್ಲಿ ಪಂಚಮಸಾಲಿ ಸಮಾಜದ ಜನರು ನಿರ್ಣಾಯಕ ಪಾತ್ರವನ್ನು ವಹಿಸಲಿದ್ದಾರೆ. ಇಂತಹ ಸಮುದಾಯಕ್ಕೆ ಕೇವಲ 1 ಕಡೆಯಲ್ಲಿ ಟಿಕೆಟ್ ನೀಡುವ ಮೂಲಕ ಪಂಚಮಸಾಲಿ ಸಮುದಾಯದ ಜನರನ್ನು ನಿರ್ಲಕ್ಷ್ಯ ಮಾಡಲಾಗಿದೆ. ನಾವು ಕಳೆದ ಹಲವು ತಿಂಗಳ ಕೆಳಗೆ ಅವರಿಗೆ ವಿನಯ, ಗೌರವ, ಪ್ರೀತಿ, ಸಹನೆಯಿಂದ ರಾಜ್ಯದ 3 ಕಡೆಗಳಲ್ಲಿ ಪಂಚಮಸಾಲಿ ಸಮಾಜದವರಿಗೆ ಟಿಕೆಟ್ ಕೊಡಿ ಎಂದು ತಿಳಿಸಲಾಗಿತ್ತು. ಆದರೆ, (7ನೇ ಪುಟಕ್ಕೆ)

## ವಿಡಿಯೋಗಾಗಿ ಅಪಹರಣ !

ನಾಗಪುರ, ಏ. 10 - ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ ವಿದ್ಯಾರ್ಥಿಯೋರ್ವನನ್ನು ನಾಲ್ವರು ಯುವಕರು ಅಪಹರಿಸಿದ ಘಟನೆ ಮಹಾರಾಷ್ಟ್ರದ ನಾಗಪುರ ನಗರದಲ್ಲಿ ನಡೆದಿದೆ.

12ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳೂ ಸೇರಿದಂತೆ ನಾಲ್ವರು ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಅವರ ವಿರುದ್ಧ 11ನೇ ತರಗತಿಯ ಬಾಲಕನ ಅಪಹರಿಸಿದ (2ನೇ ಪುಟಕ್ಕೆ)

## ಅಕ್ರಮ ಆಸ್ತಿ : ಡಿಕೆಶಿಗೆ 'ಲೋಕಾ' ನೋಟಿಸ್

ಬೆಂಗಳೂರು, ಏ. 10 - ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ, ದಾಖಲಾತಿಗಳನ್ನು ಒದಗಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಲೋಕಾಯುಕ್ತ ಪೊಲೀಸ್ ವಿಭಾಗ ನೋಟೀಸ್ ನೀಡಿದೆ.

ಈ ಪ್ರಕರಣದಲ್ಲಿ ಸಿಬಿಐ ತನಿಖೆಯನ್ನು ರದ್ದುಪಡಿಸಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ, ಈ ತನಿಖೆಯನ್ನು ಲೋ ಕಾ ಯು ಕ್ತ ಕ್ಕೆ (7ನೇ ಪುಟಕ್ಕೆ)

## ಸೈನಿಕ ಶಾಲೆಗಳ ಖಾಸಗೀಕರಣ ಬೇಡ : ರಾಷ್ಟ್ರಪತಿಗೆ ಖರ್ಗೆ ಪತ್ರ

ನವದೆಹಲಿ, ಏ. 10 – ಕೇಂದ್ರ ಸರ್ಕಾರ ಸೈನಿಕ ಶಾಲೆಗಳ ಖಾಸಗೀಕರಣಕ್ಕೆ ಮುಂದಾಗಿದೆ. ಈ ನೀತಿಯನ್ನು ವಾಪಸ್ ಪಡೆಯಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪತ್ರ ಬರೆದಿದ್ದಾರೆ. ಖಾಸಗಿ ಸಹಭಾಗಿತ್ವದ ಮೂಲಕ ಸೈನಿಕ ಶಾಲೆಗಳ ಖಾಸಗೀಕರಣ ಮಾಡಲಾಗುತ್ತಿದೆ. ಶೇ.62 ರಷ್ಟು ಶಾಲೆಗಳು ಈಗ ಬಿಜೆಪಿ-ಆರ್.ಎಸ್.ಎಸ್. ನಾಯಕರ ಮಾಲೀಕತ್ವಕ್ಕೆ ಬಂದಿವೆ ಎಂದು ಖರ್ಗೆ ಪತ್ರದಲ್ಲಿ ಹೇಳಿದ್ದಾರೆ.

## ಸಿಇಟಿ ಅರ್ಜಿಗೆ ಮತ್ತೊಂದು ಅವಕಾಶ

ಬೆಂಗಳೂರು, ಏ. 10 - ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸಿಇಟಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸದವರಿಗೆ ಮತ್ತೊಂದು ಅವಕಾಶ ಮಾಡಿಕೊಡಲಾಗಿದೆ.

ಇಂತಹ ಅಭ್ಯರ್ಥಿಗಳು ಸಿಇಟಿ ಪರೀಕ್ಷಾ ಕೇಂದ್ರ ನಿಯೋಜಿಸಿದ ಕೇಂದ್ರಗಳಲ್ಲೇ ಪರೀಕ್ಷೆ ಬರೆಯುವುದು ಕಡ್ಡಾಯ.

ಕೇವಲ ನೀಟ್ ಆಯ್ಕೆ ಮಾಡಿಕೊಂಡಂತಹವರು ಈಗ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ತಿಂಗಳ 18 ಮತ್ತು 19ರಂದು ಸಿಇಟಿಗೆ ಪರೀಕ್ಷೆಗೆ ನಡೆಯಲಿದೆ. ಇದುವರೆಗೂ ಶುಲ್ಕ ಪಾವತಿಸದ ಅಭ್ಯರ್ಥಿಗಳು ಈ ತಿಂಗಳ 12ರ ಸಂಜೆ 5 ಗಂಟೆವರೆಗೆ ಅವಕಾಶ ನೀಡಲಾಗಿದೆ.

'ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, (2ನೇ ಪುಟಕ್ಕೆ)

# ನಾಳೆಯಿಂದ ನಾಮಪತ್ರ ಸಲ್ಲಿಕೆ ಆರಂಭ

## ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಾಮಪತ್ರಕ್ಕೆ ವ್ಯವಸ್ಥೆ



ದಾವಣಗೆರೆ, ಏ. 10 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಏಪ್ರಿಲ್ 12 ರ ಶುಕ್ರವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಕರ್ತವ್ಯ ದಿನಗಳಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸ್ಥಾಪಿಸಿರುವ ಚುನಾವಣಾಧಿಕಾರಿಗಳ ಸಭಾಂಗಣದಲ್ಲಿ ನಾಮಪತ್ರ ಸಲ್ಲಿಸಬಹುದು. ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 19 ಕೊನೆಯ ದಿನ ಎಂದರು.

ದಾವಣಗೆರೆ ಲೋಕಸಭೆಯ ಎಂಟು ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,946 ಮತಗಟ್ಟೆಗಳನ್ನು ಸ್ಥಾಪನೆ ಮಾಡಲಾಗಿದೆ. ಇದರಲ್ಲಿ 387 ಕ್ರಿಟಿಕಲ್ ಹಾಗೂ 11 ವಲ್ನೇರಬಲ್ ಮತಗಟ್ಟೆಗಳಿವೆ. ಶೇ.50ರಷ್ಟು ಮತಗಟ್ಟೆಗಳ ವೆಬ್‌ಕಾಸ್ಟಿಂಗ್ ಮಾಡಲಾಗುವುದು ಎಂದವರು ಹೇಳಿದರು.

ಏಪ್ರಿಲ್ 10 ರ ವರೆಗೆ 8,50,393 ಪುರುಷ, 8,55,079 ಮಹಿಳೆ, 135 ಇತರೆ ಹಾಗೂ 562 ಸೇವಾ ಮತದಾರರು ಸೇರಿ 17,06,169 ಒಟ್ಟು ಮತದಾರರಿದ್ದಾರೆ. ಏ.9 ರ ವರೆಗೆ ಸೇರ್ಪಡೆ ಹಾಗೂ ತಿದ್ದುಪಡಿಯ 42,664 ಅರ್ಜಿಗಳು ಸ್ವೀಕೃತವಾಗಿದ್ದು ಪರಿಶೀಲನೆಯ ಹಂತದಲ್ಲಿವೆ ಎಂದು ವಿವರ ನೀಡಿದರು.

**1.81 ಕೋಟಿ ರೂ. ನಗದು, ವಸ್ತು ವಶ :** ಚುನಾವಣಾ ನೀತಿ ಸಂಹಿತೆ ಜಾರಿ ನಂತರ ಒಟ್ಟು ರೂ. 1,81,26,926 ಮೌಲ್ಯದ ನಗದು ಮತ್ತು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ ಎಫ್‌ಎಸ್‌ಟಿಯಿಂದ ರೂ. 75,62,100 ನಗದು ವಶ ಹಾಗೂ ಎಸ್‌ಎಸ್‌ಟಿಯಿಂದ ರೂ. 91,39,836 ನಗದು ವಶವಾಗಿದೆ.

ಎಫ್.ಎಸ್.ಟಿ.ಯಿಂದ 400 ಟವರ್ ಫ್ಯಾನ್, 56.36 ಗ್ರಾಂ ಚಿನ್ನ, 579 ಸೀರೆಗಳನ್ನು ವಶಪಡಿಸಿಕೊಂಡಿದ್ದು ಇದರ ಮೌಲ್ಯ ರೂ.8,26 ,530 ಗಳಾಗಿರುತ್ತದೆ. ಚೆಕ್‌ಪೋಸ್ಟ್‌ಗಳಲ್ಲಿ 17 ಮೊಬೈಲ್, 300 ಜೀನ್ಸ್ ಪ್ಯಾಂಟ್ ಸೇರಿ ರೂ. 1,57,000 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಇದಲ್ಲದೇ ಅಬಕಾರಿ ಇಲಾಖೆ ರೂ.2,94,432 ಮೌಲ್ಯದ 709.145 ಲೀಟರ್ ಮದ್ಯ ವಶಪಡಿಸಿಕೊಂಡಿದೆ. ಪೊಲೀಸ್ ಇಲಾಖೆಯಿಂದ ರೂ.1,47,028 ಮೌಲ್ಯದ 372.184 ಲೀಟರ್ ಮದ್ಯ ವಶಪಡಿಸಿಕೊಂಡಿದ್ದು, ಇಲ್ಲಿಯವರೆಗೆ 290 ಎಫ್‌ಐಆರ್ ದಾಖಲಿಸಲಾಗಿದೆ.

**471 ದೂರು :** ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಸಿವಿಜಿಲ್ ಆಪ್ ಮೂಲಕ 471 ದೂರುಗಳನ್ನು ಸ್ವೀಕರಿಸಲಾಗಿದೆ. ಇವುಗಳಲ್ಲಿ ಬಹುತೇಕ ನಾಮಫಲಕಗಳಿಗೆ ಸಂಬಂಧಿಸಿದವು. 1950 ಸಂಖ್ಯೆಯ ಉಚಿತ ಸಹಾಯವಾಣಿಗೆ 345 ಕರೆಗಳು ಬಂದಿದ್ದು, ಬಹುತೇಕವು ಮಾಹಿತಿ ಕೇಳುವ (7ನೇ ಪುಟಕ್ಕೆ)

### ನೀರಿಗೆ ತುಂಗಭದ್ರಾ ಆಸರೆ

**ಜಿಲ್ಲೆಯ 45 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡು ಬಂದಿದೆ. ಜಗಳೂರು ತಾಲ್ಲೂಕಿನ ಉಚ್ಚಂಗಿಪುರಕ್ಕೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಹೇಳಿದರು. ತುಂಗಭದ್ರಾದಲ್ಲಿ ನೀರು ಹರಿಸಿರುವ ಕಾರಣ, ಜಿಲ್ಲೆಯ ನಗರ ಹಾಗೂ ಪಟ್ಟಣಗಳಿಗೆ ನೀರು ಪೂರೈಕೆಗೆ ಅನುಕೂಲವಾಗಲಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಕುಂದುವಾಡ ಕೆರೆ ಹಾಗೂ ಟಿವಿ ಸ್ಟೇಷನ್ ಕೆರೆಗಳು ಭಾಗಶಃ ಭರ್ತಿಯಾಗಿವೆ. ತುಂಗಭದ್ರಾದಲ್ಲಿ ನೀರು ಬಂದಿರುವ ಕಾರಣ, ಮುಂದಿನ 30 ದಿನಗಳಿಗೆ ದಾವಣಗೆರೆ ನಗರಕ್ಕೆ ನೀರು ಪೂರೈಕೆಯಾಗಲಿದೆ ಎಂದವರು ಹೇಳಿದರು.**

# ಪಕ್ಷೇತರ ಅಭ್ಯರ್ಥಿಯಾಗಿ ನಾಳೆ ನಾಮಪತ್ರ ಸಲ್ಲಿಕೆ




ದಾವಣಗೆರೆ, ಏ. 10- ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಜನಾಭಿಪ್ರಾಯ ಸಂಗ್ರಹಣೆ ನಂತರ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ತೀರ್ಮಾನ ಕೈಗೊಂಡಿದ್ದು, ನಾಡಿದ್ದು ದಿನಾಂಕ 12 ರಂದು ಮೊದಲ ಹಾಗೂ 18 ರಂದು ಬೆಂಬಲಿಗರೊಂದಿಗೆ ಮತ್ತೊಮ್ಮೆ ನಾಮಪತ್ರ ಸಲ್ಲಿಸುವುದಾಗಿ ಜಿ.ಬಿ. ವಿನಯ್ ಕುಮಾರ್ ತಿಳಿಸಿದ್ದಾರೆ.

ನಗರದ ಎಸ್.ಎಸ್.ಬಡಾವಣೆಯಲ್ಲಿರುವ ತಮ್ಮ ಜನಸಂಪರ್ಕ ಕಚೇರಿಯಲ್ಲಿ ಇಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಕಾಂಗ್ರೆಸ್ ಪಕ್ಷದ ಟಿಕೆಟ್ ಕೈ ತಪ್ಪಿದ್ದರಿಂದ ಪಕ್ಷೇತರ ಅಭ್ಯರ್ಥಿಯಾಗಿ ಜನರ ಒತ್ತಾಸೆ ಮೇರೆಗೆ ಸ್ಪರ್ಧಿಸಲು ನಿರ್ಧರಿಸಿದ್ದೇನೆ. ಯಾವುದೇ ಕಾರಣಕ್ಕೂ ನಾಮಪತ್ರ ಹಿಂತೆಗೆಯುವ ಪ್ರಶ್ನೆಯೇ ಇಲ್ಲ. ಸುಮಾರು ಲಕ್ಷಾಂತರ ಮತದಾರರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ. ಅವರೆಲ್ಲರೂ ನನ್ನನ್ನು ಚುನಾವಣೆಗೆ ಸ್ಪರ್ಧಿಸಲೇಬೇಕೆಂದು ಒತ್ತಡ ಹಾಕಿದ್ದಾರೆ. ಅವರ ಆಶಯದ ಮೇರೆಗೆ ಸ್ಪರ್ಧಿಸಲು ಮುಂದಾಗಿದ್ದೇನೆ ಎಂದರು.

ಜಿಲ್ಲೆಯ ಎರಡು ಪ್ರಬಲ ಕುಟುಂಬಗಳ ರಾಜಕಾರಣದ ವಿರುದ್ಧ ನಾನು ಪಕ್ಷೇತರನಾಗಿ ಸ್ಪರ್ಧಿಸುತ್ತಿದ್ದೇನೆ. ಶಾಮನೂರು ಕುಟುಂಬದ ಕೈಯಲ್ಲಿ 'ಕಾಂಗ್ರೆಸ್' ಮತ್ತು ಸಿದ್ದೇಶ್ವರ ಕುಟುಂಬದ ಕೈಯಲ್ಲಿ 'ಬಿಜೆಪಿ' ಇದೆ. ಇದೇ ದಿನಾಂಕ 24 ನಾಮಪತ್ರ ವಾಪಸ್ ಪಡೆಯಲು ಅಂತಿಮ ದಿನವಾಗಿದ್ದರೂ ಸಹ ಯಾವುದೇ ಒತ್ತಡಗಳಿಗೆ ಮಣಿಯುವುದಿಲ್ಲ ಎಂದು (7ನೇ ಪುಟಕ್ಕೆ)



ಚಂದಿರನ ಕಣ್ಣಾಮುಚ್ಚಾಲೆ

ದಾವಣಗೆರೆ: ಚಂದ್ರಮಾನ ಯುಗಾದಿಯನ್ನು ಜಿಲ್ಲೆಯಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಬುಧವಾರ ಸಂಜೆ ದಾವಣಗೆರೆ ನಗರದಲ್ಲಿ ಕೆಲವರು ಮಾತ್ರ ಚಂದ್ರದರ್ಶನ ಮಾಡಿದರು. ಕಪ್ಪು ಮೋಡ ಆವರಿಸಿದ್ದರಿಂದ ಚಂದ್ರನ ದರ್ಶನವಾಗದೆ ಬಹುತೇಕ ಜನರು ನಿರಾಶರಾದರು.

# ದ್ವಿತೀಯ ಪಿಯುಸಿ : ದಿ ಟೀಮ್ ಅಕಾಡೆಮಿಗೆ 99.99

ದಾವಣಗೆರೆ, ಏ. 10 - ನಗರದ ದಿ ಟೀಮ್ ಅಕಾಡೆಮಿಗೆ ದ್ವಿತೀಯ ಪಿಯುಸಿಯಲ್ಲಿ ಶೇ. 99.99 ಫಲಿತಾಂಶ ಲಭಿಸಿದೆ.

526 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, 524 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಕಾಲೇಜಿಗೆ ಶೇ. 99.99 ಒಟ್ಟು ಫಲಿತಾಂಶ ತಂದಿರುತ್ತಾರೆ. ಸ್ಫೂರ್ತಿ ಎಸ್. ಸಂಕಣ್ಣನವರ್ ಮತ್ತು ತನುಜಾ ಡಿ 600 ಅಂಕಗಳಿಗೆ 587 ಅಂಕಗಳನ್ನು ಗಳಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. 309 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 205 ವಿದ್ಯಾರ್ಥಿಗಳು ಪ್ರಥಮ ದರ್ಜೆ, 10 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಕನ್ನಡ ಭಾಷಾ ವಿಷಯದಲ್ಲಿ 06, ಸಂಸ್ಕೃತ ವಿಷಯದಲ್ಲಿ 04, ರಸಾಯನ ಶಾಸ್ತ್ರ ವಿಷಯದಲ್ಲಿ 06, ಗಣಿತ ವಿಷಯದಲ್ಲಿ 10, ಜೀವ ಶಾಸ್ತ್ರ ವಿಷಯದಲ್ಲಿ 16, ಗಣಕ ವಿಜ್ಞಾನ ವಿಷಯದಲ್ಲಿ 5 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಗಳಿಸಿರುತ್ತಾರೆ.

ಎಲ್ಲಾ ವಿದ್ಯಾರ್ಥಿಗಳನ್ನು ಮಂಜಪ್ಪ ಕೆ.ಎಂ. (ಅಧ್ಯಕ್ಷರು, ದಿ ಟೀಮ್ ಅಕಾಡೆಮಿ) ಎಸ್.ವಿ.ವಿ.ಆರ್. ಭೂಷಣಮ್ (ಕಾರ್ಯದರ್ಶಿ ದಿ ಟೀಮ್ ಅಕಾಡೆಮಿ) ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು. ಸಿಬ್ಬಂದಿ ವರ್ಗದವರಿಂದ ಅಭಿನಂದಿಸಿದ್ದಾರೆ.

# ಹಲಗೇರಿಯಲ್ಲಿಂದು ಶ್ರೀ ಬನಶಂಕರಿ ಉತ್ಸವ



ರಾಣೇಬೆನ್ನೂರು ತಾಲ್ಲೂಕಿನ ಹಲಗೇರಿ ಗ್ರಾಮದ ಶ್ರೀ ಬನಶಂಕರಿ ದೇವಿ ಉತ್ಸವ ಇಂದು ಜರುಗಲಿದೆ. ನಾಳೆ ಶುಕ್ರವಾರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ನಾಳೆಯಿಂದ ಮಕ್ಕಳಿಗಾಗಿ 'ಸಂಸ್ಕಾರ ಶಿಬಿರ'

ದಾವಣಗೆರೆ, ಏ. 10- ಋಷಿ ಸಂಸ್ಕೃತಿ ವಿದ್ಯಾಕೇಂದ್ರದ ವತಿಯಿಂದ ನಾಡಿದ್ದು ದಿನಾಂಕ 12ರ ಶುಕ್ರವಾರದಿಂದ ಒಂದು ವಾರಗಳ ಕಾಲ ಮಕ್ಕಳಿಗಾಗಿ ಸಂಸ್ಕಾರ ಶಿಬಿರ ಹಾಗೂ ಸಿದ್ಧ ಸಮಾಧಿ ಯೋಗ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಶುಕ್ರವಾರ ಸಂಜೆ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರೇಣುಕಾ ಮಾತಾಜಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 9448667523, 9964675441, 9731993770.

## ಎಂ.ಜಿ. ಗುರುಬಸಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ 5ನೇ ಕ್ರಾಸ್ ವಾಸಿ ದಿ. ಮಸನೀಕಟ್ಟೆ ಗೌಡ್ರು ಈಶ್ವರಪ್ಪನವರ ಧರ್ಮಪತ್ನಿಯಾದ ಶತಾಯುಷಿ

**ಎಂ.ಜಿ. ಗುರುಬಸಮ್ಮ**

ಇವರು ದಿನಾಂಕ 10.4.2024ರ ಬುಧವಾರ ದೈವಾಧೀನರಾದ ತಿಳಿಸಲು ವಿಷಾದಿಸುತ್ತೇವೆ. ನಾಲ್ವರು ಪುತ್ರರು, ಮೂರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆನ್ನು ದಿನಾಂಕ 11.4.2024ರ ಗುರುವಾರ ಮಧಾಹ್ನ 12.30ಕ್ಕೆ ಬೂದಾಳ್ ರೋಡ್ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ : ಎಂ.ದೇವಿರಮ್ಮ
ಎಂ.ಜಿ. ಷಣ್ಮುಖಪ್ಪ, ಎಂ.ಜಿ. ಶಶಿಧರ, ಎಂ.ಇ. ಮಹೇಶ್
9844850543, 9880266366, 9742313607

|| ಶ್ರೀ ರಂಗನಾಥ ಸ್ವಾಮಿ ಪ್ರಸನ್ನ ||

## ವಿವಾಹ ಮಹೋತ್ಸವದ ಆಮಂತ್ರಣ

ಲಿಂ|| ಶ್ರೀಮತಿ ಪಾರ್ವತಮ್ಮ, ಲಿಂ|| ಶ್ರೀ ಅಣಬೇರು ಚಂದ್ರಪ್ಪ
ಇವರ ಕೃಪಾಶೀರ್ವಾದಗಳೊಂದಿಗೆ
ಶ್ರೀ ಅಣಬೇರು ಜಗದೀಶ್ ಮತ್ತು ಶ್ರೀಮತಿ ಸಂಗೀತ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕೆ 1946ನೇ ಶ್ರೀ ಕ್ರೋಧಿನಾಮ ಸಂವತ್ಸರದ ಚೈತ್ರ ಶುದ್ಧ ದಿನಾಂಕ : 12.04.2024ನೇ ಶುಕ್ರವಾರ ಶುಭ ದಿನ ಬೆಳಿಗ್ಗೆ 7.00 ರಿಂದ 7.45ರ ವರೆಗೆ ಸಲ್ಲುವ ಮೇಷ ಲಗ್ನದ ಶುಭ ಮುಹೂರ್ತದಲ್ಲಿ

ನಮ್ಮ ಸುಪುತ್ರಿ
**ಚಿ|| ಕುಂ||ಸೌ|| ಸಮೀಕ್ಷಾ ಅಣಬೇರು.**
ಮತ್ತು
**ಚಿ||ರಾ|| ವಿನಯ್ ಕುಮಾರ್ ಎಸ್.ವಿ.**
(ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಶರಣಪ್ಪ ವಟಗಲ್, ಲಿಂಗಸಗೂರು ಇವರ ಸುಪುತ್ರ)

ಇವರ ಶುಭ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ, ಆಶೀರ್ವದಿಸಬೇಕಾಗಿ ಕೋರುತ್ತೇವೆ.

ಆರತಕ್ಷತೆ : ದಿನಾಂಕ : 11.04.2024ನೇ ಗುರುವಾರ ಸಂಜೆ 7.00 ರಿಂದ
ಶುಭ ವಿವಾಹ : ದಿನಾಂಕ : 12.04.2024ನೇ ಶುಕ್ರವಾರ
ಮುಹೂರ್ತ : ಬೆಳಗ್ಗೆ 7.00 ರಿಂದ 7.45ರವರೆಗೆ
ವಿವಾಹ ಸ್ಥಳ : ತ್ರಿಶೂಲ್ ಕಲಾ ಭವನ, ಪಿ.ಬಿ. ರಸ್ತೆ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಮಮತ, ಡಾ|| ಅಣಬೇರು ಬಸವರಾಜ್, ಶ್ರೀಮತಿ ಸಂಗೀತ, ಶ್ರೀ ಅಣಬೇರು ಜಗದೀಶ್ ಡಾ|| ಶಶಾಂಕ್ ಅಣಬೇರು, ಫೋ. : 93425 80866, 97400 96918

ತಮ್ಮ ಸುಖಾಗಮನ ಬಯಸುವವರು :
ಶ್ರೀಮತಿ ಶಕುಂತಲಮ್ಮ ಪಾಟೀಲ್, ಬ್ಯಾಡಗಿ, ಶ್ರೀಮತಿ ಅಣಬೇರು ಪಾರ್ವತಮ್ಮ ಮಾಜಿ ಅಧ್ಯಕ್ಷರು, ಜಿ.ಪಂ. ದಾವಣಗೆರೆ., ಶ್ರೀಮತಿ ಲತಾ, ಶ್ರೀ ರವೀಂದ್ರ ದೊಡ್ಡಮನೆ, ಶ್ರೀಮತಿ ಬಸಮ್ಮ ಎನ್.ಸಿ., ಡಾ. ಎಂ.ಜಿ. ಈಶ್ವರಪ್ಪ, ಶ್ರೀಮತಿ ಕವಿತಾ ಮಂಜುನಾಥ್, ಶ್ರೀಮತಿ ಸುಶಾ, ಶ್ರೀ ಚಿರಾಗ್ ಅಣಬೇರು, ಶ್ರೀಮತಿ ಡಾ|| ಸಿಂಧು, ಡಾ|| ಚಿರಂತ್ ಅಣಬೇರು, ಶ್ರೀಮತಿ ಸಿಂಧು, ಶ್ರೀ ನಿಹಾರ್ ದೊಡ್ಡಮನೆ, ಶ್ರೀಮತಿ ಶೋಭಾ, ಶ್ರೀ ಸಂತೋಷ್ ಪಾಟೀಲ್ ಹಾಗೂ ಬಂಧು-ಮಿತ್ರರು.

ಆತ್ಮೀಯರೇ... ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

# ಚುನಾವಣಾ ವೆಚ್ಚ ವೀಕ್ಷಕರಾಗಿ ಪ್ರತಿಭಾ ಸಿಂಗ್

ದಾವಣಗೆರೆ,ಏ. 10- ಲೋಕ ಸಭಾ ಚುನಾವಣಾ ಕಣದಲ್ಲಿನ ಅಭ್ಯರ್ಥಿಗಳ ಖರ್ಚು - ವೆಚ್ಚಗಳ ಮೇಲೆ ನಿಗಾವಹಿಸಲು ದಾವಣಗೆರೆ ಜಿಲ್ಲೆಗೆ ವೆಚ್ಚ ವೀಕ್ಷಕರನ್ನಾಗಿ ಚುನಾವಣಾ ಆಯೋಗವು ಐ.ಆರ್.ಎಸ್ ಸೇವೆಯ ಪ್ರತಿಭಾ ಸಿಂಗ್ ಅವರನ್ನು ನೇಮಕ ಮಾಡಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ. ಲೋಕಸಭಾ ಚುನಾವಣೆ ಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ರೂ. 95 ಲಕ್ಷಗಳ ವರೆಗೆ ಚುನಾ ವಣಾ ವೆಚ್ಚ ಮಾಡಲು ಮಿತಿ ಇರುತ್ತದೆ.

SRI SIDDESHWARA PRE-PRIMARY, PRIMARY AND HIGH SCHOOL
# 4998, 17th Cross, Anjaneya Badavane, Davangere - 577 004.
TEACHERS WANTED
For the Following Positions
Pre-Primary Teachers (2)
Primary Teachers (Maths & Hindi)
High School Teachers (Kannada, English & Social Science)Physical Education Teacher (1)
*Attractive Salary will be given for the deserving candidates. Visit Office or send your CV to the*
*email ID : ssvs.info@gmail.com*
Contact : 89712 44220, 08192 224751




Sri Kannikaparameshwari Devastana Daimond Jublee Vidyapeeta (R.) SINCE 1977
A.G.B. P.U. COLLEGE
2nd Main, 2nd Cross, P.J. Extension, Davangere.
EXCELLENT PERFORMANCE IN II PUC EXAMINATION 2023-24
DISTINCTION- 45 FIRST CLASS - 100

VINUTHA M S 581 96.8% District topper in Grant-in Aided PU Colleges — COMMERCE
100/100:

| | | | |
|---|---|---|---|
| STATISTICS | 08 | PHYSICS | 04 |
| ECONOMICS | 10 | CHEMISTRY | 03 |
| ACCOUNTANCY | 08 | MATHEMATICS | 05 |
| BUSINESS STUDIES | 06 | BIOLOGY | 03 |

SHAMA FATHIMA 567 94.5% Mathematics 100/100 — SCIENCE

GOWRI M 579 • 96.5%
SANJANA P 578 • 96.3%
AISHWARYA P 573 • 95.5%
LEELAVATHI G 573 • 95.5
PRADEEP R 571 • 95.2%
M S MAHESHANANDA 567 • 94.5%
NAYANA R 566 • 94.3%
PUSHPA H B 566 • 94.3%
SANJANA S 546 • 91%
PRASHANTH H 539 • 89.8%
KEERTHANA Y T 536 • 89.3%
DARSHAN R 535 • 89.2%
LATHA T N 559 • 93.2%
SUBRAMANYA S R 558 • 93%
SHREE GOWRI B H 557 • 92.8%
CHAITRA M 552 • 92%
KAVYA R 552 • 92%
CHANDU S 551 • 91.8%
AKASH R N 550 • 91.7%
PRAJWAL P 549 • 91.5%
DEVIKA MAGENAHALLI 522 • 87%
TANUSHREE P 517 • 86.2%
ANANYA E S 514 • 85.6%
Above 95% Only Govt. Fees
VARSHINI S V 549 • 91.5%
SINDHU C 548 • 91.3%
DHANUSH KUMAR G 542 • 90.3%
NAYANA S S 534 • 89%
RANJITHA N 534 • 89%
SRUSHTI J K 534 • 89%
R BINDU 533 • 88.8%
VISHAL SINGH 528 • 88%
JAYANTH N 527 • 87.8%
VEERABHADRA G D 521 • 86.8%
VIDYABHASKAR SHET 520 • 86.7%
KHAJA HUSSAIN A S 510 • 85%

ADMISSIONS OPEN FOR ACADEMIC YEAR 2024-25
Kindergarten to Graduation Level
COMMERCE (AEBS) 1st Year PUC SCIENCE (PCMB)
Economics, Business Studies, Accountancy, Statistics
Physics, Chemistry, Mathematics, Biology
1st Year B.COM. B.C.A.
CONTACT: 08192-230125, 9972700084, 9731331556, 9740351816
Hearty Congratulations for the meritorious students of our college from Honourable President Shri. C.R. Virupakshappa, President Shri R.S. Narayanaswamy, Secretery Shri Ananthramsetty, Chairman Shri A.G. Suryaprakash, Administrator Dr. B.P. Kumar, All Trustees, Principal Shri Pradeepkumar S. Teaching and Non Teaching Staff.

# ನಾಳೆಯಿಂದ ನಾಮಪತ್ರ ಸಲ್ಲಿಕೆ ಆರಂಭ

**(5ನೇ ಪುಟದಿಂದ)** ಕರೆಗಳಾಗಿವೆ ಎಂದು ಜಿಲ್ಲಾಧಿಕಾರಿ ಹೇಳಿದರು.

**ಎಂಟು ಗಡೀಪಾರು :** ಮುಕ್ತ, ನ್ಯಾಯ ಸಮ್ಮತ ಹಾಗೂ ಶಾಂತಿಯುತ ಚುನಾವಣೆ ನಡೆಸುವುದಕ್ಕೆ ಬೆದರಿಕೆ ಒಡ್ಡಬಹುದಾದ 1,300 ರೌಡಿಶೀಟರ್‌ಗಳ ವರದಿ ರೂಪಿಸಲಾಗಿದೆ. 24 ಜನರನ್ನು ಗಡೀಪಾರಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಈಗಾಗಲೇ 8 ಜನರ ಗಡೀಪಾರು ಮಾಡಲಾಗಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.

ಸಾಮಾಜಿಕ ಜಾಲತಾಣದಲ್ಲಿನ ದ್ವೇಷ ಭಾಷಣ ಸೇರಿದಂತೆ ಶಾಂತಿ ಕದಡುವ ಪೋಸ್ಟ್ ಹಾಕುವವರ ಮೇಲೆ ನಿಗಾ ವಹಿಸಲಾಗಿದೆ ಎಂದರು.

**ಕ್ಯೂ.ಆರ್. ಕೋಡ್ ಸ್ಲಿಪ್ :** ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್ ಮಾತನಾಡಿ, ಪ್ರತಿ ಮನೆಗೆ ಮತದಾರರ ಚೀಟಿ, ಮತಗಟ್ಟೆಯ ವಿವರ ಹಾಗೂ ಜಿಲ್ಲಾಧಿಕಾರಿಗಳ ಮನವಿ ಪತ್ರ ನೀಡಲಾಗುವುದು. ಕ್ಯೂ.ಆರ್. ಕೋಡ್ ಇರುವ ವೋಟರ್ ಸ್ಲಿಪ್ ನೀಡಲಿದ್ದು, ಇದರಿಂದ ಮತಗಟ್ಟೆ ಬಗ್ಗೆ ತಿಳಿಯಲು ಅನುಕೂಲವಾಗಲಿದೆ ಎಂದರು.

ಏ.28ರಂದು ನಮ್ಮ ನಡೆ ಮತಗಟ್ಟೆ ಕಡೆ ಎಂಬ ಕಾರ್ಯಕ್ರಮ ನಡೆಸುವ ಮೂಲಕ ಮತಗಟ್ಟೆ ಎಲ್ಲಿದೆ ಎಂಬುದನ್ನು ಪರಿಚಯಿಸಲಾಗುವುದು ಎಂದು ಹೇಳಿದರು.

### 550 ಪುನರಾವರ್ತಿತ ಮತದಾರರು

**1.70 ಲಕ್ಷ ಮತದಾರರ ಪಟ್ಟಿ ಬಗ್ಗೆ ಬಿಜೆಪಿ ಆಕ್ಷೇಪಿಸಿ ದೂರು ನೀಡಿತ್ತು. ಈ ಬಗ್ಗೆ ಪರಿಶೀಲಿಸಿದಾಗ 550 ಜನರ ಹೆಸರು ಪುನರಾವರ್ತನೆಯಾಗಿರುವುದು ಪತ್ತೆಯಾಗಿದೆ. ಉಳಿದವರು ನೈಜ ಮತದಾರರು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.**

**ಜಿಲ್ಲಾ ಉಸ್ತುವಾರಿ ಸಚಿವರ ಮನೆಗೆ ಅಧಿಕಾರಿಗಳು ಭೇಟಿ ನೀಡುತ್ತಿದ್ದಾರೆ ಎಂದು ಬಿಜೆಪಿಯಿಂದ ದೂರು ನೀಡಲಾಗಿತ್ತು. ಆದರೆ, ನೀತಿ ಸಂಹಿತೆ ಜಾರಿಯ ನಂತರ ಅಧಿಕಾರಿಗಳು ಭೇಟಿ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.**

**ವಿನೋಬ ನಗರದ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಕುರಿತು ಬಿಜೆಪಿ ದೂರು ನೀಡಿದೆ. ಈ ದೂರಿನ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.**

**ಕಾಂಗ್ರೆಸ್‌ನಿಂದ ಅಕ್ರಮವಾಗಿ ಅಕ್ಕಿ ವಿತರಿಸಲಾಗುತ್ತಿದೆ ಎಂಬ ವಿಡಿಯೋ ಒಂದು ಹರಿದಾಡಿದ ಬಗ್ಗೆ ಮಾಹಿತಿ ಬಂದಿದ್ದು, ಈ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.**

### 135 ಮತಗಟ್ಟೆಗಳ ಮತದಾನ ಹೆಚ್ಚಿಸಲು ಗಮನ

**ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ.72.96ರಷ್ಟು ಮತದಾನವಾಗಿತ್ತು. ಈ ಬಾರಿ ಶೇ.85ರಷ್ಟು ಮತದಾನವಾಗಬೇಕು ಎಂಬ ಸಂಕಲ್ಪವಿದೆ. ಈ ಹಿನ್ನೆಲೆಯಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್ ಹೇಳಿದರು.**

**ಕಳೆದ ಬಾರಿ 135 ಮತಗಟ್ಟೆಗಳಲ್ಲಿ ಕ್ಷೇತ್ರದ ಸರಾಸರಿಗಿಂತ ಶೇ.10ರಷ್ಟು ಕಡಿಮೆ ಮತದಾನವಾಗಿತ್ತು. ಈ ಮತಗಟ್ಟೆಗಳಲ್ಲಿ ಹೆಚ್ಚಿನ ಗಮನ ಹರಿಸಲಾಗಿದೆ ಎಂದರು.**

# ಪಂಚಮಸಾಲಿ ಸಮುದಾಯ ಬಿಜೆಪಿಯನ್ನೇಕೆ ಬೆಂಬಲಿಸಬೇಕು ?

**(5ನೇ ಪುಟದಿಂದ)** ರಾಜ್ಯದ 9 ಕಡೆಗಳಲ್ಲಿ ಲಿಂಗಾಯತ ಸಮುದಾಯದವರಿಗೆ ಟಿಕೆಟ್ ಕೊಟ್ಟರೆ ಪಂಚಮಸಾಲಿ ಸಮಾಜದವರಿಗೆ ಮಾತ್ರ 1 ಟಿಕೆಟ್ ನೀಡಲಾಗಿದೆ.

ಇನ್ನೊಂದು ಉಪ ಪಂಗಡಗಳಿಗೆ 4-4 ಕಡೆಗಳಲ್ಲಿ ನೀಡಲಾಗಿದೆ. ಇದನ್ನು ಮೇಲ್ನೋಟಕ್ಕೆ ಗಮನಿಸಿದಾಗ ಬಿಜೆಪಿಯವರಿಗೆ ಪಂಚಮಸಾಲಿ ಸಮಾಜದ ಮತಗಳು ಅವಶ್ಯಕತೆ ಇರುವುದಿಲ್ಲ, ಪಂಚಮಸಾಲಿ ಸಮಾಜದವರು ಬೆಳಯಬಾರದು ಎಂದು ಅನಿಸುತ್ತದೆ. ಆದರೆ, ಪಂಚಮಸಾಲಿ ಸಮಾಜದ ಜನರು ಜಾಗೃತರಾಗಿದ್ದಾರೆ. ಈ ತಪ್ಪನ್ನು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮಾಡಿದ್ದರಿಂದ ರಾಜ್ಯದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿದೆ. ಮತ್ತೆ ಆ ತಪ್ಪನ್ನು ಪುನರಾವರ್ತನೆ ಮಾಡದೇ ಪಕ್ಷದ ಮುಖಂಡರು ಅರಿತುಕೊಂಡು ಜಾಗೃತರಾಗಬೇಕಿದೆ. ಒಂದು ವೇಳೆ ಜಾಗೃತರಾಗದೇ ಹೋದರೆ ಪಂಚಮಸಾಲಿ ಸಮಾಜದ ಜನರು ನಿಮ್ಮನ್ನು ಮತ್ತೆ ಜಾಗೃತರನ್ನಾಗಿ ಮಾಡುತ್ತಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಪಂಚಮಸಾಲಿ ಸಮಾಜದ ಶಾಸಕರು, ಮಾಜಿ ಶಾಸಕರು ಮತ್ತು ಸಮಾಜದ ಹಿರಿಯರು ನಮ್ಮ ಸಂಪರ್ಕ ಮಾಡುತ್ತಾ ಬಂದಿದ್ದಾರೆ. ಇನ್ನೂ ಕಾಲ ಮಿಂಚಿಲ್ಲ, ಸಮಯದ ಅವಕಾಶ ಇರುವುದರಿಂದ ಪಂಚಮಸಾಲಿ ಸಮಾಜದ ಹಿರಿಯರ ಜೊತೆಗೆ ಚರ್ಚೆ ಮಾಡಿ ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ಮುಂದಾದರೆ ಒಳಿತು ಎಂದು ಅವರು ಹೇಳಿದರು.

# ಪಕ್ಷೇತರ ಅಭ್ಯರ್ಥಿಯಾಗಿ ನಾಳೆ ನಾಮಪತ್ರ ಸಲ್ಲಿಕೆ

**(5ನೇ ಪುಟದಿಂದ)** ಹೇಳಿದರು. ನನ್ನ ಸ್ಪರ್ಧೆಯಿಂದ ಅಹಿಂದ ಮತಗಳು ಛಿದ್ರವಾಗುವ ಸಾಧ್ಯತೆ ಇದ್ದು, ಅಹಿಂದ ವರ್ಗಕ್ಕೆ ಶಾಮನೂರು ಕುಟುಂಬದಿಂದ ಅನ್ಯಾಯವಾಗಿದೆ. ಈ ಕಾರಣದಿಂದಾಗಿ ಅಹಿಂದ ಮುಖಂಡರು ನನಗೆ ಬೆಂಬಲ ನೀಡಲಿದ್ದಾರೆಂದು ಮಾಹಿತಿ ನೀಡಿದರು.

ಸಿಎಂ ಸಿದ್ದರಾಮಯ್ಯ, ಕಾಗಿನೆಲೆ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಂಧಾನ ನಡೆಸಿರುವುದು ಸರಿಯಷ್ಟೇ. ನಾನು ಎರಡು ದಿನಗಳ ಕಾಲವಕಾಶ ಕೇಳಿ ನಿರ್ಧಾರ ತಿಳಿಸುತ್ತೇನೆ ಎಂದಿದ್ದೆ. ಜನಾಭಿಪ್ರಾಯದಂತೆ ಚುನಾವಣೆಯಲ್ಲಿ ಸ್ಪರ್ಧಿಸಲು ಅಂತಿಮ ತೀರ್ಮಾನ ಕೈಗೊಂಡಿದ್ದೇನೆ ಎಂದು ಹೇಳಿದರು. ಈಗಾಗಲೇ ಈ ಎರಡೂ ಕುಟುಂಬಗಳ ರಾಜಕಾರಣದ ವಿರುದ್ಧ ಜನ ಬೇಸತ್ತಿದ್ದು, ಜನ ಬದಲಾವಣೆ ಬಯಸಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಬಗ್ಗೆ ಬಹಳಷ್ಟು ಜನರಿಗೆ ಅಸಮಾಧಾನವಿದೆ. ಹಾಗಾಗಿ ನನ್ನನ್ನು ಬೆಂಬಲಿಸುತ್ತಾರೆಂಬ ದೃಢ ವಿಶ್ವಾಸ ನನ್ನದಾಗಿದೆ ಎಂದು ಹೇಳಿದರು.

## ಪಿ.ಯು: ಜಿಲ್ಲೆಗೆ 21ನೇ ಸ್ಥಾನ

**(5ನೇ ಪುಟದಿಂದ)** 91.13 ರಷ್ಟು ಫಲಿತಾಂಶ ಬಂದಿದ್ದು ಗಂಡು.ಶೇ 91.39 ಹಾಗೂ ಹೆಣ್ಣು ಶೇ.88.69 ರಷ್ಟು ಫಲಿತಾಂಶ ಬಂದಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಶಾಲಾ ಶಿಕ್ಷಣ, ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ಉಪಸ್ಥಿತರಿದ್ದರು.




# ರಾಜ್ಯದಾದ್ಯಂತ ಶೇ.81.15 ಫಲಿತಾಂಶ

**(5ನೇ ಪುಟದಿಂದ)** ಹುಬ್ಬಳ್ಳಿಯ ವಿದ್ಯಾನಿಕೇತನದ ವಿದ್ಯಾಲಕ್ಷ್ಮಿ ಗರಿಷ್ಟ 600 ಅಂಕಗಳ ಪೈಕಿ 598 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದಾರೆ.

ನಂತರದಲ್ಲಿ ಉಡುಪಿಯ ವಿದ್ಯೋದಯ ಪಿಯು ಕಾಲೇಜಿನ ವೈಷ್ಣವಿ ಹಾಗೂ ಮೈಸೂರು ಆದಿಚುಂಚನಗಿರಿ ಪಿಯು ಕಾಲೇಜಿನ ಕೆ.ಎಚ್.ಉರ್ಮಿಶ್ 597 ಅಂಕ ಪಡೆದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ತುಮಕೂರು ವಿದ್ಯಾನಿಧಿ ಕಾಲೇಜಿನ ಗಾನವಿ 597 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದರೆ, ಶಿವಮೊಗ್ಗದ ಕುಮದ್ವತಿ ಪಿಯು ಕಾಲೇಜಿನ ಪವನ್ ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಹರ್ಷಿತ್ 594 ಅಂಕ ಪಡೆದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಕಲಾ ವಿಭಾಗದಲ್ಲಿ ಬೆಂಗಳೂರಿನ ಎನ್‌ಎಂಕೆಆರ್‌ವಿ ಪಿಯು ಕಾಲೇಜಿನ ಮೇಧಾ ಡಿ. 596 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದಾರೆ.

ಮೂರೂ ವಿಭಾಗಗಳಲ್ಲಿ ಬಾಲಕಿಯರೇ ಪ್ರಥಮ ಸ್ಥಾನಗಳನ್ನು ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಮೂವರು ಪ್ರಥಮ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಬೆಂಗಳೂರು ಜಯನಗರದ ಎನ್‌ಎಂಕೆಆರ್‌ವಿಯ ಮೇಧಾ, ವಿಜಯಪುರದ ಎಸ್‌ಎಸ್ ಪಿಯು ಕಾಲೇಜಿನ ವೇದಾಂತ್ ಹಾಗೂ ಬಳ್ಳಾರಿಯ ಇಂದೂ ಪಿಯು ಕಾಲೇಜಿನ ಕವಿತಾ ಬಿ.ವಿ ತಲಾ 596 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ಧಾರವಾಡ ಕೆಇಬಿ ಪಿಯು ಕಾಲೇಜಿನ ರವೀನಾ ಸೋಮಪ್ಪ ಲಮಾಣಿ 595 ಅಂಕ ಪಡೆದು ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಗಣಿತದಲ್ಲಿ 6,960 ಮಂದಿ, ಜೀವಶಾಸ್ತ್ರದಲ್ಲಿ 5,925 ಮಂದಿ, ಕನ್ನಡದಲ್ಲಿ 2,570 ಮಂದಿ, ಸಂಸ್ಕೃತದಲ್ಲಿ 1,499 ಮಂದಿ, ಅರ್ಥಶಾಸ್ತ್ರದಲ್ಲಿ 1,403 ಮಂದಿ, ಗಣಕ ವಿಜ್ಞಾನದಲ್ಲಿ 2,661 ಮಂದಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿದ್ದಾರೆ.

ಪುನರಾವರ್ತಿತ ವಿದ್ಯಾರ್ಥಿಗಳಲ್ಲಿ ಶೇಕಡ 41.98 ಮಂದಿ ಹಾಗೂ ಖಾಸಗಿಯಾಗಿ ಪರೀಕ್ಷೆ ಬರೆದವರಲ್ಲಿ ಶೇಕಡ 48.16 ಮಂದಿ ಉತ್ತೀರ್ಣರಾಗಿದ್ದಾರೆ.


ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿಗಾಗಿ ಅರ್ಜಿ ಸಲ್ಲಿಸಲು ಏಪ್ರಿಲ್ 10ರಿಂದ ಏಪ್ರಿಲ್ 16ರವರೆಗೆ ಅವಕಾಶವಿದೆ.


ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿ ಡೌನ್ಲೋಡ್ ಮಾಡಿಕೊಳ್ಳಲು ಏಪ್ರಿಲ್ 14ರಿಂದ ಏಪ್ರಿಲ್ 19ರವರೆಗೆ, ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಅಂಕ ಎಣಿಕೆಗಾಗಿ ಅರ್ಜಿ ಸಲ್ಲಿಸಲು ಏಪ್ರಿಲ್ 14ರಿಂದ ಏಪ್ರಿಲ್ 20ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಸ್ಕ್ಯಾನ್ಡ್ ಪ್ರತಿ ಪಡೆಯಲು ಪ್ರತಿ ವಿಷಯಕ್ಕೆ 530 ರೂ. ಶುಲ್ಕ ಪಾವತಿಸಬೇಕಿದ್ದು, ಮರುಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ 1,670 ರೂ. ಆಗಿರುತ್ತದೆ.

# ಆಸ್ತಿ : ಡಿಕೆಶಿಗೆ 'ಲೋಕಾ' ನೋಟಿಸ್

**(5ನೇ ಪುಟದಿಂದ)** ವಹಿಸಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸ್ ವಿಭಾಗ, ಕಳೆದ ಫೆ.8ರಂದು ಡಿ.ಕೆ.ಶಿವಕುಮಾರ್ ವಿರುದ್ಧ ಎಫ್.ಐ.ಆರ್. ದಾಖಲಿಸಿಕೊಂಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ್ ನೀಡಿರುವ ಲೋಕಾಯುಕ್ತ ಬೆಂಗಳೂರು ನಗರ ವಿಭಾಗದ ತನಿಖಾಧಿಕಾರಿ ಎಂ.ಹೆಚ್. ಸತೀಶ್, ಈ ಹಿಂದೆ ಸಿಬಿಐ ತನಿಖಾಧಿಕಾರಿಗಳಿಗೆ ನೀಡಿದ್ದ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸುವಂತೆ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.







KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas